9

# ಬೈಬಲಿನ ಅಧಿಕಾರ

ನಮ್ಮ ಅಧ್ಯಯನವು ಹೆಚ್ಚಾಗಿ ಪೂರ್ತಿಗೊಂಡಿದೆ. ಇಲ್ಲಿಯವರೆಗೆ ಬೈಬಲಿನ ದೈವ ಪ್ರೇರಣೆಯ ಮೇಲೆ ನಮ್ಮ ಒತ್ತು ಕೊಡುವಿಕೆಯಿತ್ತು. ಆದರೆ ದೈವ ಪ್ರೇರಣೆಯ ಸಂಗತಿಯು ಪುಸ್ತಕದ ಅಧಿಕಾರವನ್ನು ಪ್ರಧಾನವಾಗಿ ಹೇಳುತ್ತದೆ. ಆದುದರಿಂದ ಈ ಅಂತಿಮ ಪಾಠವು ಆ ಅಧಿಕಾರವನ್ನು ಒತ್ತಿ ಹೇಳುತ್ತದೆ.

## "ವಾಕ್ಯವನ್ನು ಪ್ರಸಂಗಿಸು"

ರೋಮಿನ ಮಾಮರಟ್ಟಿನ್ ಸೆರೆಮನೆಯಲ್ಲಿ ಮರಣದ ದವಡೆಯೊಳಗಿಂದ ಪೌಲನಿಂದ ಹೇಳಲ್ಪಟ್ಟ ಅಪ್ಪಣೆಗಿಂತ ಹೆಚ್ಚು ಗಂಭೀರವಾದದ್ದು ಬೇರಾವುದೂ ಇಲ್ಲ. ಅವನ ಅಪ್ಪಣೆಯು ಸುವಾರ್ತೆಯಲ್ಲಿ ತನಗೆ ಪ್ರೀತಿಯ ಮಗನಾಗಿದ್ದ, ಸಮುದ್ರದಾಚೆ ಎಫೆಸದಲ್ಲಿ ಸೇವೆಗೆ ನೇಮಕವಾಗಿದ್ದ ತಿಮೊಥೆಯನಿಗಾಗಿತ್ತು. "ಮುದುಕನೂ ಆಗಿರುವ ಪೌಲನು" ಎಂದು ತನ್ನನ್ನು ವರ್ಣಿಸಿದ್ದ ನಂತರ (ಫಿಲೆಮೋನ 9), ಐದು ವರ್ಷಗಳಾದ ಮೇಲೆ ಅಪೊಸ್ತಲನು ಅರವತ್ತೇಳು ವರ್ಷದವನಾಗಿದ್ದನು. ಮುದುಕ ಮನುಷ್ಯನ ದೇಹದ ಮೇಲೆ ಯೇಸುವಿನ ಮುದ್ರೆಗಳಿದ್ದವು (ಗಲಾತ್ಯ 6:17). ಆ ಗುರುತುಗಳಲ್ಲಿ ತಿಮೊಥೆಯ ಸ್ವಂತ ಊರಾದ ಲುಸ್ತ್ರದಲ್ಲಿ ಕಲ್ಲೆಸೆಯುವಿಕೆಯನ್ನು ಸಹಿಸಿದ್ದರ ಕಲೆಗಳಿದ್ದಿರಬಹುದು. ಇದರ ಬಗ್ಗೆ ಯುವ ತಿಮೊಥೆಯನಿಗೆ ತಿಳಿದಿತ್ತು (ಅಪೊಸ್ತಲರ ಕೃತ್ಯ 14:19; 2 ತಿಮೊಥೆ 3:11).

ಒಂದಕ್ಕಿಂತ ಹೆಚ್ಚು ಕಾರಣಕ್ಕಾಗಿ ಅಪೊಸ್ತಲನು ತಿಮೊಥೆಯನನ್ನು ಸಂದರ್ಶಿಸಲು ಅಪೇಕ್ಷಿಸಿದ್ದನು. ತನ್ನ ಮರಣ ದಂಡನೆಯಿಂದ ಯಾವುದೇ ಮನವಿ ಮಾಡಿಕೊಳ್ಳುವ ಸಾಧ್ಯತೆಯಿರಲಿಲ್ಲ.[1] ಅವನು ಮರಣ ಶಿಕ್ಷೆ ಹೊಂದುವುದು ವಸಂತ ಕಾಲದಲ್ಲಿ ಎಂದು ನಿರ್ಣಯಿಸಲ್ಪಟ್ಟಿತ್ತು. ಪೌಲನ ಕೊನೆಯ ಚಳಿಗಾಲವು ತಂಪಾದ ಸೆರೆಮನೆಯಲ್ಲಿ ಕಳೆಯಲ್ಪಡುವುದು ಅವನ ಮುಂದಿಡಲ್ಪಟ್ಟಿತ್ತು. ಸೆರೆಮನೆಯಲ್ಲಿರುವವರು ಸ್ನೇಹಿತರ ಸಹಾಯದ ಮೇಲೆ ಅವಲಂಬಿಸಿದ್ದರು (2 ತಿಮೊಥೆ 1:16, 17), ಪೌಲನಿಗೆ ತಲೆಮುಚ್ಚುವ ಮೈಗೆ ಹೊದ್ದುಕೊಳ್ಳುವ ಮೇಲಂಗಿ ಬೇಕಾಗಿತ್ತು (ಗ್ರೀಕ್: *ಫೈಲೋನೆಸ್*), ಅದನ್ನು ಅವನು ತ್ರೋವದಲ್ಲಿ ಕರ್ಪನ ಬಳಿಯಲ್ಲಿ ಬಿಟ್ಟು ಬಂದಿದ್ದನು (2 ತಿಮೊಥೆ 4:13), ಆದುದರಿಂದ "ಚಳಿಗಾಲಕ್ಕಿಂತ ಮುಂಚೆಯೇ ಬರುವದಕ್ಕೆ ಪ್ರಯತ್ನಮಾಡು" ಎಂದು ಅವನು ತಿಮೊಥೆಯನನ್ನು ಕೇಳಿಕೊಂಡಿದ್ದನು (2 ತಿಮೊಥೆ 4:21).

ಹೀಗಿದ್ದರೂ, ತನ್ನ ಬಳಿಗೆ ತಿಮೊಥೆಯನು ಬರಬೇಕೆಂದು ಪೌಲನು ಬಯಸಿದ್ದಕ್ಕೆ ಮುಖ್ಯ ಕಾರಣವು ಯುವಕನ ಹೃದಯದಲ್ಲಿ ಒಂದನ್ನು ಹೆಚ್ಚು ಆಳವಾಗಿ ಇಡುವದಕ್ಕಾಗಿತ್ತು. ತನ್ನ ನಂಬಿಗಸ್ತ ಆಶ್ರಿತನನ್ನು ತಾನು ಮುಖಾಮುಖಿಯಾಗಿ ನೋಡುವೆನೋ ಇಲ್ಲವೋ ಎಂದು ಅಪೊಸ್ತಲನು ತಿಳಿಯದೇ ಇದ್ದುದರಿಂದ ಸುವಾರ್ತಿಕನ ಹೃದಯದೊಳಗೆ ಈ ವಿಷಯವನ್ನಿಡಲು ಪತ್ರದಲ್ಲಿ ಬರೆಯಲು ತೀರ್ಮಾನಿಸಿದನು: "ದೇವರ ವಾಕ್ಯವನ್ನು ಸಾರು."

"ದೇವರ ವಾಕ್ಯವನ್ನು ಸಾರು" (2 ತಿಮೊಥಿ 4:2) ಎಂದು ಪೌಲನು ಬರೆಯುವುದು ಬಹಳ ಗಂಭೀರವಾದದ್ದಾಗಿತ್ತು. ಪ್ರಾಣಿಗಳ ರಕ್ಷಣೆಗಾಗಿ ಆಳವಾದ ಬಯಕೆಯುಳ್ಳ, ದಂಡನೆ ಹೊಂದಿದ ಸೆರೆಯವನಾದವನಿಂದ, ತಾನು ಬಹಳವಾಗಿ ಅವಲಂಭಿಸಿದ ಯುವಕ ಸೇವಕನಿಗೆ ನಿರ್ದೇಶಿಸಿದ ಮೂರು ಮಾತುಗಳು ಗಂಭೀರತೆಯನ್ನು ಕೂಡಿಸಿರುತ್ತವೆ. "ಅದು ದೇವರ ಸನ್ನಿಧಿಯಲ್ಲಿ" (1 ತಿಮೊಥೆ 6:13) ಕೊಡಲ್ಪಟ್ಟಿದೆ ಎಂದು ತಿಮೊಥೆಯನಿಗೆ ಹೇಳುವದರಿಂದ ಪೌಲನು ಅಪ್ಪಣೆಯನ್ನು ಇನ್ನೂ ಗಂಬೀರ ವಾದದ್ದನ್ನಾಗಿ ಮಾಡಿದನು. ಆಮೇಲೆ ಅವನು ಕ್ರಿಸ್ತನ ಅಗಮ್ಯವಾದ ಬೆಳಕಿನಲ್ಲಿ (*Gk.: epiphaneia*) ಬದುಕಿರುವವರಿಗೂ ಸತ್ತವರಿಗೂ ನ್ಯಾಯತೀರಿಸಲು ತನ್ನ ರಾಜ್ಯದ ಕೊನೆಯ ಕರ್ತವ್ಯವನ್ನು ನೆರವೇರಿಸುವನೆಂದು ಹೇಳಿದನು. ನಿಶ್ಚಯವಾಗಿಯೂ "ವಾಕ್ಯ ವನ್ನು ಸಾರು" ಎಂದು ಅಪ್ಪಣೆಯನ್ನು ಕೊಡುವ ಮೊದಲು ಎಫೆಸದ ಪ್ರಸಂಗಿಯ ಗಮನವನ್ನು ಸೆಳೆಯಲು ಪೌಲನು ಹೇಳಬೇಕಾದದ್ದೆಲ್ಲವನ್ನೂ ಹೇಳಿದನು.

## "ವಾಕ್ಯ"ದ ಅರ್ಥ

ಅಪ್ಪಣೆಯು (*Gk.: keruxon ton logon* ಅರ್ಥ - "ಮಾಹಿತಿಯನ್ನು ತಿಳಿಸು. ಸಂದೇಶವನ್ನು ಸಾರು, ವಾಕ್ಯವನ್ನು ಪ್ರಸಂಗಿಸು") ಎಫೆಸಕ್ಕೆ ಕಳುಹಿಸಲ್ಪಟ್ಟಾಗ ಹಾಗೂ ತಿಮೊಥೆಯನಿಂದ ಓದಲ್ಪಟ್ಟಾಗ, ಅವನ ಮನಸ್ಸಿನಲ್ಲಿ ಯಾವ ವಿಚಾರವು ಬಂದಿರುವುದು? *Keruxon ton logon* ಎಂಬ ಮಾತುಗಳನ್ನು ಓದಿದಾಗ ತಿಮೊಥೆಯನಿಗೆ ಯಾವುದು ನಾಟಿತು? ಅಷ್ಟು ಅವಸರದಿಂದ ಪ್ರಸಂಗಿಸಬೇಕಾಗಿದ್ದ "ವಾಕ್ಯ" ಯಾವುದಾಗಿತ್ತು ಮತ್ತು ಯಾವುದಾಗಿರುವುದು?

### ಸೃಷ್ಟಿಸಿದ ಹಾಗೂ ಭದ್ರಪಡಿಸಿದ ವಾಕ್ಯವೋ?

ವಿಶ್ವವನ್ನು ಅಸ್ತಿತ್ವದೊಳಗೆ ತಂದದ್ದು ಬಲವಾದ ವಾಕ್ಯವಾಗಿತ್ತು: "ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವೆಂದು ನಂಬಿಕೆಯಿಂದಲೇ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ" (ಇಬ್ರಿಯ 11:3). ನೀರಿನೊಳಗಿಂದ ಭೂಮಿಯನ್ನು ರೂಪಿಸಿ ಆಕಾಶಗಳನ್ನು ಸೃಷ್ಟಿಸಿದ ದೇವರ ಸೃಷ್ಟಿಸುವ ವಾಕ್ಯವಾಗಿತ್ತು (2 ಪೇತ್ರ 3:5). "ಯೆಹೋವನ ಅಪ್ಪಣೆಯಿಂದಲೇ ಆಕಾಶವು ಉಂಟಾಯಿತು; ಅದರಲ್ಲಿರುವದೆಲ್ಲವೂ ಆತನ ಶ್ವಾಸದಿಂದ ನಿರ್ಮಿತವಾಯಿತು ... ಆತನು ನುಡಿದ ಮಾತ್ರಕ್ಕೆ ಸಮಸ್ತವೂ ಉಂಟಾಯಿತು; ಆತನು ಆಜ್ಞಾಪಿಸುತ್ತಲೇ ಸರ್ವವೂ ಸ್ಥಾಪನೆಯಾಯಿತು" (ಕೀರ್ತನೆ 33:6-9).

ಸೃಷ್ಟಿಯ ಪ್ರಾರಂಭಕ್ಕೆ ಪರಿಣಾಮವಾದ ದೇವರ ಮಾತಿನಲ್ಲಿ ಅಡಗಿದ್ದ ಬಲವು "ಆತನ ಬಲದ ವಾಕ್ಯದಿಂದ" ಆತನು ಎಲ್ಲಾ ಸಂಗತಿಗಳನ್ನು ಕಾಪಾಡುವದರಲ್ಲಿಯೂ ಮೇಲಕ್ಕೆತ್ತಿ ಹಿಡಿಯುವದರಲ್ಲಿಯೂ ಇನ್ನೂ ಕಂಡುಬರುತ್ತದೆ (ಇಬ್ರಿಯ 1:3). "ಆತನ ವಾಕ್ಯವು" (2 ಪೇತ್ರ 3:7) ಅಕಾಶವನ್ನೂ ಭೂಮಿಯನ್ನು ನ್ಯಾಯತೀರ್ವಿಕೆಯ ದಿನದಂದು ಬೆಂಕಿಗಾಗಿ ಕಾದಿಟ್ಟಿರುತ್ತದೆ. ಸೃಷ್ಟಿಯ ಮತ್ತು ಕಾಪಾಡುವಿಕೆಯ ಆತನ ವಾಕ್ಯವು ಬಲವಾದದ್ದಾಗಿದ್ದರೂ ಪೌಲನು ತಿಮೊಥೆಯನಿಗೆ ಕೊಟ್ಟ ತನ್ನ ಅಪ್ಪಣೆಯಲ್ಲಿ ದೇವರ ವಾಕ್ಯದ ಆ ವಿಷಯವನ್ನು ಚರ್ಚಿಸಿದನೆಂಬುದಕ್ಕೆ ಯಾವುದೇ ಸೂಚನೆಯಿರುವದಿಲ್ಲ.

**ಪಿತೃಗಳಿಗೆ ಕೊಟ್ಟ ವಾಕ್ಯವೋ?**

ದೇವರ ವಾಕ್ಯವು ಆದಾಮನಿಗೆ, ಕಾಯಿನನಿಗೆ, ನೋಹನಿಗೆ, ಅಬ್ರಹಾಮನಿಗೆ ಮತ್ತು ಅನೇಕ ಇತರ ಪಿತೃಗಳಿಗೆ ಬಂದಿತು (ಆದಿಕಾಂಡ 2:16; 4:12; 6:14; 12:1). ತಿಮೊಥೆಯನಿಗೆ ಇದು ತಿಳಿದಿತ್ತು (2 ತಿಮೊಥೆ 3:15). ಆದರೆ ವಾಕ್ಯವನ್ನು ಸಾರ ಬೇಕೆಂದು ತಿಮೊಥೆಯನಿಗೆ ಬರೆದ ಹಳೇ ಒಡಂಬಡಿಕೆಯ ಹೇಳಿಕೆಗಳು ಪೌಲನ ದೃಷ್ಟಿಕೋನದಲ್ಲಿ ಇತ್ತು ಎಂಬುದಕ್ಕೆ ಪುರಾವೆಯಿರುವದಿಲ್ಲ.

**ಇಸ್ರಾಯೇಲಿಗೆ ಕೊಟ್ಟ ವಾಕ್ಯವೋ?**

ನಡುಗುತ್ತಿರುವ ಸಿನಾಯಿ ಬೆಟ್ಟದ ತುದಿಯಿಂದ ಕೆಳಗಿನ ಕೊಳ್ಳದಲ್ಲಿಯ ಇಸ್ರಯೇಲಿನ ಜನಸಮೂಹಕ್ಕೆ ದೇವರ ವಾಕ್ಯವು ಭಯಪಡಿಸುವ ರೀತಿಯಲ್ಲಿ ಕೊಡಲ್ಪಟ್ಟಿತ್ತು (ವಿಮೋಚನಕಾಂಡ 20:1-19). ಅನಂತರದಲ್ಲಿ, ದೇವರು ತಾನು ಬಾಯ್ದೆರೆಯಾಗಿ ಘೋಶಿಸಿದ್ದನ್ನು ಎರಡು ಕಲ್ಲಿನ ಹಲಿಗೆಗಳ ಮೇಲೆ ತನ್ನ ಕೈಬೆರಳುಗಳಿಂದ ಬರೆದನು (ವಿಮೋಚನಕಾಂಡ 31:18; 34:28, 29). ಅದಲ್ಲದೇ, ಮೋಶೆಗೆ ಇದರ ನಿಯಮಗಳ ಪುಸ್ತಕವನ್ನು ಬರೆಯಲು ಹೇಳಿದನು (ವಿಮೋಚನಕಾಂಡ 24:4; ಇಬ್ರಿಯ 9:19). ಕಲ್ಲುಗಳು ಮತ್ತು ಪುಸ್ತಕ ಎರಡೂ ಕರ್ತನ ವಾಕ್ಯವನ್ನು ಒಳಗೊಂಡಿದ್ದವು (ವಿಮೋಚನಕಾಂಡ 35:1). ಮೋಶೆಯು ಪರ್ವತದಿಂದ ಕೆಳಗೆ ತಂದದ್ದು ರಕ್ತದಿಂದ ಬರೆಯಿಸಲ್ಪಟ್ಟ, ಅಧಿಕೃತ ಹೀಬ್ರು ಮಟ್ಟದ್ದಾಗಿರಬೇಕಾಗಿತ್ತು. ಅದಕ್ಕೆ ಕೂಡಿಸಲ್ಪಡ ಬಾರದು, ಇಲ್ಲವೇ ಅದರಿಂದ ತೆಗೆದು ಹಾಕಲ್ಪಡಬಾರದು (ಧರ್ಮೋಪದೇಶಕಾಂಡ 4:2). ಮೋಶೆಯ ಧರ್ಮಶಾಸ್ತವನ್ನು, ಕರ್ತನ ವಾಕ್ಯವನ್ನು ಕಡೆಗಣಿಸುವವನು, ಸತ್ತು ಹೋಗುವನು (ಇಬ್ರಿಯ 10:28). ಧರ್ಮಶಾಸ್ತ್ರತದಲ್ಲಿ ಬರೆಯಲ್ಪಟ್ಟದ್ದನ್ನು ಮೋಶೆಯ ಮುಖಾಂತರ ದೇವರ ವಾಕ್ಯವನ್ನು ಬಿಟ್ಟು ಬೇರೆಯದನ್ನು ಮಾತಾಡುತ್ತಿರುವವನು ದೇವರ ಸತ್ಯವಿಲ್ಲದೇ ಮಾತಾಡುತ್ತಿರುವನು. ಹೀಗಿದ್ದರೂ, ಧರ್ಮಶಾಸ್ತ್ರದಲ್ಲಿ ಕರ್ತನ ವಾಕ್ಯವು ಮುಖ್ಯವಾದದ್ದಾಗಿದ್ದಂತೆ, ತಿಮೊಥೆಗೆ ಕೊಟ್ಟ ತನ್ನ ಅಪ್ಪಣೆಯಲ್ಲಿ ಅದು ಪೌಲನ ಮನಸ್ಸಿನಲ್ಲಿತ್ತೆಂಬ ಸೂಚನೆಯಿರಲಿಲ್ಲ.

**ವ್ಯಕ್ತಿಯಂಥಾ ವಾಕ್ಯವೋ?**

ಹಾಗೆಯೇ, ಪೌಲನ ಅಪ್ಪಣೆಯಲ್ಲಿರುವಂತ ವಾಕ್ಯವೆಂಬ ಪದಕ್ಕೆ, ಯೋಹಾನ 1:1ರ ಲೋಗೊಸ್, ವಾಕ್ಯದ ವಿಶೇಷ ಅರ್ಥವಿರುವಂತೆ ಕಂಡು ಬರುವದಿಲ್ಲ: "ಆದಿಯಲ್ಲಿ ವಾಕ್ಯವಿತ್ತು ಹಾಗೂ ಆ ವಾಕ್ಯವು ದೇವರ ಬಳಿಯಲ್ಲಿತ್ತು ಮತ್ತು ಆ ವಾಕ್ಯವು ದೇವರಾಗಿತ್ತು" ಯೋಹಾನ 1:1ರ ವಾಕ್ಯವು ಯೇಸು ಕ್ರಿಸ್ತನಲ್ಲದೇ ಬೇರಾರೂ ಅಲ್ಲ. ಆತನು "ಶರೀರ ಧರಿಸಿ, ನಮ್ಮ ಮಧ್ಯದಲ್ಲಿ ವಾಸ ಮಾಡಿದನು" (ಯೋಹಾನ 1:14). ತಿಮೊಥೆಯನು ಕ್ರಿಸ್ತನನ್ನು ಪ್ರಸಂಗಿಸುವುದು ನಿಜವಾಗಿರುವಾಗ (ನೋಡಿರಿ ಅಪೊಸ್ತಲರ ಕೃತ್ಯ 8:5). 2 ತಿಮೊಥೆ 4:2ರ "ವಾಕ್ಯವು" ತಿಮೊಥೆಯನು ಪ್ರಸಂಗಿಸ ಬೇಕಾದ ಕ್ರಿಸ್ತನ ಬಗ್ಗೆ ಮಾಹಿತಿಯೆಂದು ಇಲ್ಲವೇ ಸಂದೇಶವೆಂದು ಕಂಡು ಬರುತ್ತದೆ. ಅವನು "ವಾಕ್ಯ," ಯೇಸುವಿನ ಬಗ್ಗೆ ವಾಕ್ಯವನ್ನು ಪ್ರಸಂಗಿಸಬೇಕಾಗಿತ್ತು.

# “ವಾಕ್ಯದ” ಬಗ್ಗೆ ವಾಕ್ಯ

**ರಾಜ್ಯದ ವಾಕ್ಯ**

ಕ್ರಿಸ್ತನ ಶಿಷ್ಯರಂತೆ, ಪೌಲ ಮತ್ತು ತಿಮೊಥೆ ಇಬ್ಬರೂ ಯೇಸುವು ಪ್ರಸಂಗಿಸಿದ್ದನ್ನು ಪ್ರಸಂಗಿಸುವರು. ಯೇಸುವು “ವಾಕ್ಯವನ್ನು” ಮಾತಾಡುತ್ತಿರುವನು ಎಂದು ಮಾರ್ಕ 2:2 ಹೇಳುತ್ತದೆ. ಯೇಸುವಿನ ಸಂದೇಶವು “ಪರಲೋಕ ರಾಜ್ಯದ ವಾಕ್ಯ”ವಾಗಿತ್ತು (ಮತ್ತಾಯ 13:19). ನಾಶಪಡಿಸಲಿಕ್ಕಾಗದ ರಾಜ್ಯವನ್ನು ದೇವರು ಸ್ಥಾಪಿಸುವನು ಎಂಬ ದಾನಿಯೇಲನ ಮುಂತಿಳಿಸುವಿಕೆಯ ಬಗ್ಗೆ ಯೇಸುವಿಗೆ ಪರಿಚಯವಿತ್ತು (ದಾನಿಯೇಲ 2:44); ಆ ರಾಜ್ಯವನ್ನು ಸ್ಥಾಪಿಸಲು ಯೇಸು ಪರಲೋಕವನ್ನು ಬಿಟ್ಟು ಬಂದನು. “ಇದಕ್ಕಾಗಿ ನಾನು ಜನಿಸಿದ್ದೇನೆ, ಹಾಗೂ ನಾನು ಇದಕ್ಕಾಗಿ ಈ ಲೋಕದೊಳಗೆ ಬಂದಿದ್ದೇನೆ” (ಯೋಹಾನ 18:37). “ಕಾಲವು ಪರಿಪೂರ್ಣವಾಗಿದೆ ಹಾಗೂ ದೇವರ ರಾಜ್ಯವು ಹತ್ತಿರವಾಗಿದೆ” (ಮಾರ್ಕ 1:15) ಎಂದು ಆತನು ಸಾರಿದನು. ಅದರ ಪ್ರಕಾರವಾಗಿ, “ಅವರ ಸಭಾ ಮಂದಿರಗಳಲ್ಲಿ ಬೋಧಿಸುತ್ತ ಹಾಗೂ ರಾಜ್ಯದ ಸುವಾರ್ತೆಯನ್ನು ಪ್ರಸಂಗಿಸುತ್ತ” ಪಾಲೆಸ್ತೀನದ ಭಾಗಗಳಲ್ಲಿ ಆತನು ಪ್ರಯಾಣಮಾಡಿದನು (ಮತ್ತಾಯ 4:23). ಕ್ರಿ.ಶ. 29ರಲ್ಲಿ ರಾಜ್ಯವು ಅಷ್ಟು ಹತ್ತಿರವಾಗಿತ್ತೆಂದು ಯೇಸು ಮುಂತಿಳಿಸಿದನು. “... ಇಲ್ಲಿ ನಿಂತವರಲ್ಲಿ ಕೆಲವರು ದೇವರ ರಾಜ್ಯವು ಶಕ್ತಿಯೊಂದಿಗೆ ಬರುವದನ್ನು ನೋಡು ವವರೆಗೆ ಮರಣ ಹೊಂದುವದೇ ಇಲ್ಲ” (ಮಾರ್ಕ 9:1).

ಸಿದ್ಧತೆಯ ಅರ್ಥದಲ್ಲಿ, ಯೇಸುವಿನ ವೈಯಕ್ತಿಕ ಸೇವೆಯ ಮೂರು ವರ್ಷಗಳ ಅವಧಿಯಲ್ಲಿ (ಕ್ರಿ.ಶ. 27-30) ಆತನ ಮತ್ತು ಯೋಹಾನನ ಬೋಧನೆಗೆ ತಕ್ಕಂತೆ ಬಾಪ್ತಿಸ್ಮ ಹೊಂದಿದವರು (ಮತ್ತಾಯ 3:1-6; ಯೋಹಾನ 4:1, 2) ದೇವರ ರಾಜ್ಯದಲ್ಲಿ ಪ್ರವೇಶಿಸುತ್ತಿದ್ದರು (ನೋಡಿರಿ ಲೂಕ 16:16). ಅವರು ನೀರಿನಿಂದಲೂ ಆತ್ಮನಿಂದಲೂ ಹೊಸದಾಗಿ ಹುಟ್ಟಿದ್ದರು (ಯೋಹಾನ 3:5). ಕರ್ತನಿಗಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದರು (ಲೂಕ 1:17). ಹೀಗಿದ್ದರೂ, ನಿಜವಾದ ಅರ್ಥದಲ್ಲಿ ಯೇಸುವು ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವನ್ನು ಹೊಂದಿಕೊಳ್ಳುವವರೆಗೆ ಮತ್ತು ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಪರಲೋಕಕ್ಕೆ ಏರಿಹೋಗುವ ವರೆಗೆ ರಾಜ್ಯವು ನಿಜವಾಗಿಯೂ ಏರ್ಪಡಿಸಲ್ಪಟ್ಟಿರಲಿಲ್ಲ (ಮತ್ತಾಯ 28:18; ಅಪೊಸ್ತಲರ ಕೃತ್ಯ 2:29, 30).

ಯೇಸುವಿನಿಂದ ಪ್ರಸಂಗಿಸಲ್ಪಟ್ಟ ರಾಜ್ಯವು ಅದ್ವಿತೀಯವಾದದ್ದಾಗಿತ್ತು. ಅದು ಈ ಲೋಕದ್ದಲ್ಲ ಆದರೆ ಪರಲೋಕದ್ದು (ಯೋಹಾನ 18:36; ಮತ್ತಾಯ 4:17): “ಪರಲೋಕ ರಾಜ್ಯವು ಹತ್ತಿರವಾಗಿದೆ” ಅದರ ಬಲವು ಕಬ್ಬಿಣದ ಆಯುಧಗಳಲ್ಲಿರಲಿಲ್ಲ, ಆದರೆ ಪ್ರೀತಿಯ ಬಲದಲ್ಲಿ ಇತ್ತು (ಮತ್ತಾಯ 5:44). ಅದರ ಸ್ಥಿತಿಯು ಗರ್ವವಾಗಿರಲಿಲ್ಲ, ಆದರೆ ದೀನತೆಯಾಗಿತ್ತು (ಮತ್ತಾಯ 5:5). ಅದರ ಒತ್ತಡವು ಪಡೆದುಕೊಳ್ಳುವದಾಗಿರಲಿಲ್ಲ ಆದರೆ ಕೊಡುವದಾಗಿತ್ತು (ಮತ್ತಾಯ 10:8), ಅದು ದೃಶ್ಯವಾದದ್ದಾಗಲೀ ಇಲ್ಲವೇ ಮುಟ್ಟುವಂಥದ್ದಾಗಲೀ ಆಗಿರಲಿಲ್ಲ. ಆದರೆ ಅದು ಮನುಷ್ಯನ ಹೃದಯದಲ್ಲಿ ಜೀವನವಾಗಿತ್ತು (ನೋಡಿರಿ ಲೂಕ 17:21; ಯೋಹಾನ 18:36). ಅದರ ತತ್ವಗಳು ದಯೆ, ಶಾಂತಿ ಹಾಗೂ ನೀತಿಯಾಗಿದ್ದವು (ಮತ್ತಾಯ 5:3-9). ನಿಜವಾಗಿಯೂ ಅದು ಈ ಜೀವನದ ನಂತರದ ಪರಲೋಕದ ರಾಜ್ಯದ ಪೂರ್ವಾನುಭವವಾಗಿತ್ತು.

ಯೇಸುವಿನ ದಿವಾರೋಹಣದ ನಂತರ ಮೊದಲನೆಯ ಪಂಚಾಶತ್ತಮದ ದಿನವು ರಾಜ್ಯವು ಅಸ್ತಿತ್ವದಲ್ಲಿ ಬಂದ ಸಮಯವೆಂದು ತೋರಿಸಲ್ಪಟ್ಟಿದೆ. ಆ ದಿನ ನೂತನವಾಗಿ ಕಿರೀಟಧಾರಣೆ ಮಾಡಿದ ಅರಸನು, ಈಗ ಪರಲೋಕದಲ್ಲಿ “ಆನಂದದ ತೈಲದಿಂದ”

ತನ್ನ ತಂದೆಯಿಂದ ಅಭಿಷೇಕ ಹೊಂದಿದನು (ಇಬ್ರಿಯ 1:9). ತನ್ನ ಪಟ್ಟಾಭಿಷೇಕದ ನಂತರ, ಆತನ ಮೊದಲನೆಯ ರಾಜ್ಯ ಕಾರ್ಯವು ತನ್ನ ರಾಯಭಾರಿಗಳನ್ನು, ತನ್ನ ಅಪೊಸ್ತಲರನ್ನು ತುಂಬಿಸಲು ಪರಿಶುದ್ಧಾತ್ಮನನ್ನು ಕಳುಹಿಸಿ ಕೊಟ್ಟದ್ದು (ಅಪೊಸ್ತಲರ ಕೃತ್ಯ 2:33; 2 ಕೊರಿಂಥ 5:20). ಆ ರಾಯಭಾರಿಗಳು ಆಗ ಲೋಕದ ಕಟ್ಟಕಡೆಯವರೆಗೆ, ರೋಮ್‌ದಲ್ಲಿ ಆಳುವ ಭೂಲೋಕದ ಅರಸನಲ್ಲದೇ "ಇನ್ನೊಬ್ಬ ಅರಸ ಯೇಸುವು" ಇರುವನೆಂದು ಸಾರಿದರು (ಅಪೊಸ್ತಲರ ಕೃತ್ಯ 17:7). ಮಹಿಮೆಗೇರಿಸಲ್ಪಟ್ಟ ಕ್ರಿಸ್ತನ ಬಗೆಗಿನ "ವಾಕ್ಯವನ್ನು" ಪಾಪಿಗಳು ಎಲ್ಲೆಲ್ಲಿ ಸಂತೋಷದಿಂದ ಸ್ವೀಕರಿಸಿದರೋ (ಅಪೊಸ್ತಲರ ಕೃತ್ಯ 2:41) ಅವರು ಬಾಪ್ತಿಸ್ಮ ಹೊಂದಿದರು. ಸಾವಿರಾರು ಜನರು "ವಾಕ್ಯ" ದಿಂದ ಹುಟ್ಟಿದವರು (ಯಾಕೋಬ 1:18; ನೋಡಿರಿ 1 ಪೇತ್ರ 1:23, 24) ನೀರಿನಿಂದಲೂ ಆತ್ಮನಿಂದಲೂ ತಾವು ಹುಟ್ಟಿರುವದನ್ನು ಪೂರ್ತಿಗೊಳಿಸಲು ನೀರಿನ ಕೊಳಗಳ ಬಳಿಗೆ ನಡಿಸಲ್ಪಟ್ಟರು (ಯೋಹಾನ 3:5).

ವಾಕ್ಯವು ಪ್ರಸಂಗಿಸಿದಾಗಲೆಲ್ಲಾ ಅದು ಕ್ರಿಸ್ತನನ್ನು ಪ್ರಸಂಗಿಸಲ್ಪಟ್ಟದ್ದಾಗಿತ್ತು (ಅಪೊಸ್ತಲರ ಕೃತ್ಯ 8:5). ಅದು "ರಾಜ್ಯದ ಬಗೆಗಿನ ಶುಭವಾರ್ತೆಯಾಗಿತ್ತು" (ಅಪೊಸ್ತಲರ ಕೃತ್ಯ 8:12). ಬಾಪ್ತಿಸ್ಮದ ಹಂತದಲ್ಲಿ, ಪಾಪಿಗಳು ಕತ್ತಲೆಯ ಸಾಮ್ರಾಜ್ಯದಿಂದ ದೇವರ ಪ್ರಿಯ ಕುಮಾರನ ರಾಜ್ಯದೊಳಗೆ ಬದಲಾಯಿಸಲ್ಪಟ್ಟರು (ಕೊಲೊಸ್ಸೆ 1:13). ಭೂಲೋಕದಲ್ಲಿಯ ರಾಜ್ಯದಲ್ಲಿ ನಂಬಿಗಸ್ತ ಸೇವೆಯು ಅನೇಕ ಕಷ್ಟಶ್ರಮೆಗಳ ನಂತರ, ಅವರು "ಉತ್ತಮ ಜಗತ್ತಿನಲ್ಲಿ, ದೇವರ ರಾಜ್ಯದೊಳಗೆ" ಪ್ರವೇಶಿಸುವುದು ಅದರ ಪೌರರಿಗೆ ಭರವಸೆ ಕೊಡಲ್ಪಟ್ಟಿತು (ಅಪೊಸ್ತಲರ ಕೃತ್ಯ 14:22). ಹೀಗೆ "ದೇವರ ರಾಜ್ಯದ ವಾಕ್ಯವು" (ಮತ್ತಾಯ 13:19) ಯೇಸುವಿನಿಂದ ಘೋಷಿಸಲ್ಪಟ್ಟಂತೆ "ವಾಕ್ಯವು" ಪೌಲನ ತಿಮೊಥೆಯನಿಗೆ ಆಜ್ಞಾಪಿಸುವಾಗ ಅವನ ಮನಸ್ಸಿನಲ್ಲಿತ್ತು. ಆ ರಾಜ್ಯಕ್ಕೆ ಸಂಬಂಧಪಟ್ಟಿದ್ದ ಪ್ರತಿಯೊಂದೂ ತಿಮೊಥೆಯನ ಪ್ರಸಂಗದಲ್ಲಿ ಒಳಗೊಳ್ಳಬೇಕಾಗಿತ್ತು.

**ಹೊಸ ಒಡಂಬಡಿಕೆಯ ಪುಸ್ತಕಗಳು**

ಅರಸನು ಕಳುಹಿಸಿಕೊಟ್ಟ ಪರಿಶುದ್ಧಾತ್ಮನು ಮತ್ತಾಯ, ಯೋಹಾನ ಮತ್ತು ಪೇತ್ರ ರಂಥ ಅಪೊಸ್ತಲರನ್ನು ಎಲ್ಲಾ ಸತ್ಯದಲ್ಲಿ (ಯೋಹಾನ 16:13) ನಡಿಸಿದನು. ಮಾರ್ಕ, ಲೂಕ, ಯಾಕೋಬ ಮತ್ತು ಯೂದರಂಥ ಪ್ರವಾದಿಗಳನ್ನು ಆತ್ಮನು ಪ್ರೇರೇಪಿಸಿದನು (ಅಪೊಸ್ತಲರ ಕೃತ್ಯ 13:1, 2) ಮತ್ತು ಪೌಲನನ್ನು ಅವನು ಮಾತನಾಡಿದ ಪ್ರತಿಯೊಂದು ಮಾತುಗಳಲ್ಲಿ (1 ಕೊರಿಂಥ 2:13) ಹಾಗೂ ಕನಿಷ್ಟ ಪಕ್ಷ ಹನ್ನೆರಡು ಪುಸ್ತಕಗಳನ್ನು ಬರೆಯುವಲ್ಲಿ (1 ಕೊರಿಂಥ 14:37) ಮಾರ್ಗದರ್ಶನ ಮಾಡಿದನು (ಯೋಹಾನ ಬರಹಗಳನ್ನು ಬಿಟ್ಟು) ಇದೆಲ್ಲವೂ ತಿಮೊಥೆಯನು ಪೌಲನಿಂದ ತನ್ನ ಅಪ್ಪಣೆ ಹೊಂದುವ ಸಮಯದೊಳಗೆ ಸಾಧಿಸಲ್ಪಟ್ಟಿದ್ದರೆ ಆಗ ಯುವಕನು ಪ್ರಸಂಗಿಸುವದಕ್ಕೆ ಉಚಿತ "ವಾಕ್ಯದ" ವಿಪುಲವಾದ ಮಾಹಿತಿಯು ಅವನಿಗಿತ್ತು. ವ್ಯವಹಾರಿಕವಾಗಿ ಮಾತನಾಡುವದಾದರೆ, ಕ್ರಿ.ಶ. 96ರ ಸುಮಾರಿಗೆ "ವಾಕ್ಯವು" ಹೊಸ ಒಡಂಬಡಿಕೆಯ ರೂಪದಲ್ಲಿ ಲಭ್ಯವಿತ್ತು. ಅದರಿಂದ ಸುವಾರ್ತೆಯ ಸೇವಕರು ತಮ್ಮ ಪ್ರಸಂಗದ ವಿಷಯವನ್ನು ಪಡೆದುಕೊಳ್ಳಬಹುದಿತ್ತು.

ಪ್ರಕಟನೆಯ ಗ್ರಂಥಕ್ಕೆ (ಪ್ರಕಟನೆ 22:18, 19) ಇಲ್ಲವೇ ಉಳಿದ ಯಾವುದೇ ಇಪ್ಪತ್ತೇಳು ಪುಸ್ತಕಗಳಿಗೆ ಕೂಡಿಸಲು ಇಲ್ಲವೇ ಅವುಗಳಿಂದ ತೆಗೆಯಲು ಭಯಪಡುವ ದೇವರ ಮನುಷ್ಯನಲ್ಲಿ ಸರಿಯಾದ ಮನೋಭಾವನೆಯು ಕಂಡು ಬಂದಿತು. ಕ್ರಿಸ್ತನ ಬೋಧ ನೆಯನ್ನು ದಾಟಿ ಹೋಗದಿರಲು ಅವನು ತೀರ್ಮಾನಿಸಿಕೊಂಡಿದ್ದನು (2 ಯೋಹಾನ 9-11). "ಕ್ರಿಸ್ತನ ಬೋಧನೆಯನ್ನು" ಕ್ರಿಸ್ತನ ದೈವತ್ವವನ್ನು ಕುರಿತು ಬೋಧಿಸುವ ಅರ್ಥದಂತೆ ವ್ಯಾಖ್ಯಾ

ನಿಸುವವರು, ಆ ಪುಸ್ತಕಗಳಲ್ಲಿಯ ಬೋಧನೆ ಇನ್ನೂ ಮಿತಿಗೊಳಿಸಲ್ಪಟ್ಟಿದ್ದಾರೆ. ಕ್ರಿಸ್ತನ ದೈವತ್ವವು ಆತನ ಅಧಿಕಾರದಲ್ಲಿ ಒಳಗೊಂಡಿದ್ದರಿಂದ (ಮತ್ತಾಯ 28:18; 1 ಪೇತ್ರ 3:22) ಹಾಗೂ ಕಟ್ಟುವ ಮತ್ತು ಬಿಚ್ಚುವ ತನ್ನ ಅಧಿಕಾರವನ್ನು ತನ್ನ ಅಪೊಸ್ತಲರಿಗೆ ದಾಟಿಸಿದ್ದರಿಂದ (ಮತ್ತಾಯ 16:19) ಇದು ಸತ್ಯವಾಗಿದೆ. ಹೊಸ ಒಡಂಬಡಿಕೆಯಲ್ಲಿಯ ಪ್ರತಿಯೊಂದು ಪುಸ್ತಕವನ್ನು ಅಪೊಸ್ತಲರು ಬರೆದರು ಇಲ್ಲವೇ ಅದನ್ನು ದೃಢಪಡಿಸಿರುವರು. ಅವರ ಕಟ್ಟುವ ಇಲ್ಲವೇ ಬಿಚ್ಚುವ ಅಧಿಕಾರವು ಅವುಗಳಲ್ಲಿ ಪ್ರತಿಯೊಂದಕ್ಕಿತ್ತು ಮತ್ತು ಅವುಗಳ ಹೊರಗೆ ಯಾವ ಅಧಿಕಾರವಿರಲಿಲ್ಲ. ಅಪೊಸ್ತಲರ ಬೋಧನೆಯನ್ನು ತಿರಸ್ಕರಿಸುವುದು (ಅಪೊಸ್ತಲರ' ಕೃತ್ಯ 2:42) ಕ್ರಿಸ್ತನನ್ನು ತಿರಸ್ಕರಿಸುವುದಾಗಿತ್ತು (ಲೂಕ 10:16; ನೋಡಿರಿ 1 ಯೋಹಾನ 4:6). ಅವರ ವಾಕ್ಯವು ಕ್ರಿಸ್ತನ ವಾಕ್ಯವಾಯಿತ್ತು ಮತ್ತು ಆತನ ವಾಕ್ಯವು ನ್ಯಾಯತೀರ್ವಿಕೆಯ ವಾಕ್ಯವಾಗಿದೆ (ಯೋಹಾನ 12:48).[2]

ನ್ಯಾಯ ತೀರ್ವಿಕೆಯ ದಿನದಂದು ನಮ್ಮ ಆತ್ಮಗಳಿಗೆ ನ್ಯಾಯತೀರಿಸಲು ಉಪಯೋಗಿಸಲಿಕ್ಕಿರುವ ಆ ಪುಸ್ತಕಗಳು ಬೈಬಲಿನ ಪುಸ್ತಕಗಳಾಗಿವೆ (ನೋಡಿರಿ ಪ್ರಕಟನೆ 20:12). ಅವುಗಳಿಂದ ಸತ್ತವರು ತಮ್ಮ ಕೃತ್ಯಗಳ ಪ್ರಕಾರವಾಗಿ ನ್ಯಾಯತೀರ್ಪು ಹೊಂದುವರು. ಭೂಮಿಯೂ ಆಕಾಶವೂ ಅಳಿದು ಹೋಗುವುವು. ಆದರೆ ಬೈಬಲಿನ ಪುಸ್ತಕಗಳು ನಾಶವಾಗಿ ಹೋಗುವದಿಲ್ಲ (ಮತ್ತಾಯ 24:35). "ಆತನ ಕೃಪಾವಾಕ್ಯವು" (ಅಪೊಸ್ತಲರ ಕೃತ್ಯ 20:32) ಇಂದು ರಾಜ್ಯದ ಪ್ರಜೆಗಳನ್ನು ಮಾಡುವದಕ್ಕೂ ಭಕ್ತಿವೃದ್ಧಿಪಡಿಸುವದಕ್ಕೂ ಮತ್ತು ಅವರಿಗೆ ಪ್ರತ್ಯೇಕಿಸಲ್ಪಟ್ಟವರ ಮಧ್ಯದಲ್ಲಿ ಸ್ವಾಸ್ಥ್ಯವನ್ನು ಕೊಡುವದಕ್ಕೂ ದೈವಿಕವಾಗಿ ತುಂಬಿಸಲ್ಪಟ್ಟ ಹೆಚ್ಚು ಕಡಿಮೆಯಿಲ್ಲದ ಇಪ್ಪತ್ತೇಳು ಪುಸ್ತಕಗಳಲ್ಲಿ ಒಳಗೊಂಡಿರುವುದು (ಅಪೊಸ್ತಲರ ಕೃತ್ಯ 20:32).

## ವಾಕ್ಯವನ್ನು ಪ್ರಸಂಗಿಸುವದರಲ್ಲಿ ಒಳಗೊಂಡಿದ್ದ ವಿಷಯಗಳು

ಎಲ್ಲಾ ಇಪ್ಪತ್ತೇಳು ಪುಸ್ತಕಗಳು "ದೇವರಿಂದ ಪ್ರೇರಿತವಾದವುಗಳು" ಎಂದು ಅರ್ಹತೆ ಹೊಂದಿದ್ದು (2 ತಿಮೊಥೆ 3:16) ಅವುಗಳಲ್ಲಿ ಚರ್ಚಿಸಲ್ಪಟ್ಟ ಪ್ರತಿಯೊಂದು ವಿವರವು, ಎಲ್ಲಾ ಉಪದೇಶಕ್ಕೂ, ಖಂಡನೆಗೂ ತಿದ್ದುಪಾಟಿಗೂ ನೀತಿ ಶಿಕ್ಷಣಕ್ಕೂ ಉಪಯುಕ್ತವಾಗಿದೆ. ಇದರಿಂದ ದೇವರ ಮನುಷ್ಯನು ಪರಿಪೂರ್ಣವಾಗಿ ಸಕಲ ಸತ್ಕಾರ್ಯಗಳಿಗೆ ಸನ್ನದ್ಧನಾಗುವನು. ತನ್ನ ಸೇವೆಯ ಅಂತ್ಯದಲ್ಲಿ ಒಳ್ಳೇ ಮನಸ್ಸಾಕ್ಷಿಯಿಂದ ಲಾಭವಾದವುಗಳಲ್ಲಿ ಯಾವುದನ್ನೂ ಹಿಂದಿಟ್ಟುಕೊಂಡಿರುವದಿಲ್ಲ ಎಂದು ಹೇಳುವ ಪ್ರಸಂಗಿಯು ಧನ್ಯನು. ನಂಬಿಗಸ್ತ ಪ್ರಸಂಗಿಯು ದೇವರ ಆಲೋಚನೆಗಳೆಲ್ಲವನ್ನೂ ಘೋಷಿಸುವನು. ಎಲ್ಲಾ ಜನರ ರಕ್ತದಿಂದ ಸ್ವತಂತ್ರನಾಗಿರುವನು (ಅಪೊಸ್ತಲರ ಕೃತ್ಯ 20:20-27).

### ಬೈಬಲಿನ ಪ್ರೇರೇಪಣೆ

ಈ ಅಧ್ಯಯನದಲೆಲ್ಲಾ ಒತ್ತಿಹೇಳಿದಂತೆ ಬೈಬಲಿನಲ್ಲಿ ಒಳಗೊಂಡಿರುವ ವಿಷಯಗಳಲ್ಲಿ ಒಂದು ಹಾಗೂ ವಾಕ್ಯದ ಪ್ರಸಂಗಗಳಲ್ಲಿ ಇಂದು ಅವಸರವಾಗಿ ಒತ್ತಿಹೇಳುವ ಅವಶ್ಯಕತೆಯುಳ್ಳದ್ದು ಬೈಬಲಿನ ದೈವ ಪ್ರೇರಣೆಯಾಗಿದೆ. ಅದರ ದೈವ ಪ್ರೇರಣೆಯು ವಿಲಿಯಮ್ ಶೇಕ್ಸಪಿಯರನ ನಾಟಕಗಳಿಗಿಂತ, ಇಲ್ಲವೇ ಜಾನ್ ಮಿಲ್ಟನ್‌ನ ಗದ್ಯದ ಇಲ್ಲವೇ ಆಲ್ಫ್ರೆಡ್ ಟೆನ್ನಿಸನ್‌ನ ಪದ್ಯದ ಮಟ್ಟಕ್ಕಿಂತ ಹೆಚ್ಚಿನದಾಗಿರದಿದ್ದರೆ,

ಆಗ ಬೈಬಲು ಪೂರ್ಣವಾಗಿ ಮಾನವ ಪುಸ್ತಕವಾಗಿರುವುದು ಮತ್ತು ಅಧಿಕೃತವಾದದ್ದರಂತೆ, ಪ್ರಸಂಗಿ ಸಲ್ಪಡಬಾರದ್ದಾಗುತ್ತದೆ. "ಮಾನವನ ಮಾರ್ಗವು ಅವನಲ್ಲಿಯೇ ಇರುವದಿಲ್ಲ"ವಾ ದ್ದರಿಂದ (ಯೆರೆಮೀಯ 10:23) ಮಾನವರೊಳಗಿನ ಬೈಬಲು ಮಾನವ ಕುಲವನ್ನು ಸಂಪೂರ್ಣವಾಗಿ ಸಹಾಯವಿಲ್ಲದವನನ್ನಾಗಿ ಮಾಡುವುದು. ಬೈಬಲು "(ಒಬ್ಬನ) ಪಾದಕ್ಕೆ ದೀಪವೂ ಹಾಗೂ (ಅವನ) ದಾರಿಗೆ ಬೆಳಕೂ" ಆಗಿರುತ್ತದೆ (ಕೀರ್ತನೆ 119:105). ಇದು ಸಂಪೂರ್ಣವಾಗಿ ಮಾನವನ ಬೆಳಕಾಗಿದ್ದರೆ, ಹಳೇ ಮತ್ತು ಹೊಸ ಒಡಂಬಡಿಕೆಗಳ ಅರವತ್ತಾರು ಪುಸ್ತಕಗಳಲ್ಲಿ ನಂಬಲರ್ಹ ಮಾರ್ಗ ದರ್ಶಕಗಳಂತೆ ಒಬ್ಬನು ಭರವಸೆಯನ್ನು ಸಮರ್ಪಿಸಬೇಕು.

ಪುಸ್ತಕವನ್ನು ಅಸ್ತಿತ್ವದಲ್ಲಿ ತರಲು ಸುಮಾರು ನಾಲ್ವತ್ತು ಮಾನವ ಕರ್ತೃಗಳು ಸಹಾಯ ಮಾಡಿದರೂ, ಬರಹಗಾರರು ತಮ್ಮ ಕೆಲಸದಲ್ಲಿಯ ಮೇಲ್ವಿಚಾರಣೆಯಲ್ಲಿ ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟು ಸಹಾಯ ಹೊಂದಿದರು (2 ಪೇತ್ರ 1:21). ಕೆಲವರು ತಪ್ಪಾಗಿ ಕಿಂಗ್ ಜೇಮ್ಸ್ ಆವೃತ್ತಿಯ 2 ಪೇತ್ರ 1:20ನ್ನು ವ್ಯಾಖ್ಯಾನಿಸಿದ್ದಾರೆ ("... ಪರಿಶುದ್ಧ ಬರಹದ ಯಾವುದೇ ಪ್ರವಾದನೆಯು ಒಬ್ಬನ ಸ್ವಂತ ವ್ಯಾಖ್ಯಾನದ ವಿಷಯವಾಗಿರುವದಿಲ್ಲ") ಒಂದು ವಾಕ್ಯದ ತನ್ನ ಸ್ವಂತ ವ್ಯಾಖ್ಯಾನವನ್ನು ವ್ಯಕ್ತಪಡಿಸಬಾರದು ಎಂದರ್ಥ ಕೊಡುವಂತೆ ಹೇಳಲಾಗಿದೆ. ಅವರು ಇದನ್ನು ಬೋಧಿಸುವಾಗ, ಮಾಡತಕ್ಕದ್ದಲ್ಲವೆಂದು ಅವರು ಹೇಳುವದನ್ನು ಅವರು ಮಾಡುತ್ತಿದ್ದಾರೆ. ಒಂದು ರೀತಿಯಲ್ಲಿ ಪ್ರತಿಯೊಬ್ಬ ಬೋಧಕನು ತಾನು ಚರ್ಚಿಸುತ್ತಿದ್ದ ಯಾವುದೇ ವಾಕ್ಯ ಭಾಗಕ್ಕೆ ತನ್ನ ಸ್ವಂತ ವ್ಯಾಖ್ಯಾನವನ್ನು ಕೊಡುವನು ಮತ್ತು ಅವನು ಹಾಗೆ ಮಾಡಲೇ ಬೇಕಾಗುತ್ತದೆ.

ಎಜ್ರ ಮತ್ತು ಅವನ ಜೊತೆ ಬೋಧಕರು ಬೈಬಲನ್ನು "ಸ್ತ್ರೀ ಪುರುಷರ ಮುಂದೆಯೂ ಗ್ರಹಿಕೆಯಿಂದ ಕೇಳುವವರ ಮುಂದೆಯೂ" ಓದಿದರು (ನೆಹೆಮೀಯ 8:2); "ಅವರು ಧರ್ಮ ಶಾಸ್ತ್ರವನ್ನು ಸ್ಪಷ್ಟವಾಗಿ ಓದುತ್ತ ಅದರ ತಾತ್ಪರ್ಯವನ್ನು ವಿವರಿಸಲು ಜನರು ಗ್ರಹಿಸಿದರು" (ನೆಹೆಮೀಯ 8:8). ಬೋಧಕರು ವ್ಯಾಖ್ಯಾನವನ್ನು ಬಿಟ್ಟುಬಿಡಲಾರರು. ಅವರು ಪರಿಶುದ್ಧ ಬರಹವನ್ನು "ತಮ್ಮ ಸ್ವಂತದ" ಹಾಗೂ - ಇತರರ ನಾಶನಕ್ಕೆ - ತಿರುಗಿಸದಂತೆ ಸರಿಯಾದ ವ್ಯಾಖ್ಯಾನವನ್ನು ಕೊಡುವುದು ಅವರ ಜವಾಬ್ದಾರಿಕೆಯಾಗಿರತಕ್ಕದ್ದು (2 ಪೇತ್ರ 3:16). ಕೆಲವರು ಯಾವುದೋ ಗುಂಪಿನ ಕಾರಣಾಕ್ಕಾಗಿ "ದೇವರ ವಾಕ್ಯವನ್ನು ಮೋಸಕರವಾಗಿ" ಉಪಯೋಗಿಸುತ್ತಾರೆ (2 ಕೊರಿಂಥ 4:2). "ನಾವು ದೇವರ ವಾಕ್ಯವನ್ನು ಕಲಬೆರಿಕೆ ಮಾಡುವ ಹೆಚ್ಚು ಜನರಹಾಗಿರಬಾರದು" (2 ಕೊರಿಂಥ 2:17) ಎಂದು ಪೌಲನು ಹೇಳಿ ದ್ದಾನೆ. ರೋಮನ್ ಕಥೋಲಿಕರು ಸಹ 2 ಪೇತ್ರ 1:20ನ್ನು ದುರಪಯೋಗ ಮಾಡುತ್ತಾರೆ. ಈ ವಚನವು, "ಯಾವುದೇ ಒಬ್ಬನ ವೈಯಕ್ತಿಕ ತೀರ್ಮಾನದಂತೆ ಪರಿಶುದ್ಧ ಬರಹಗಳು ವಿವರಿಸಲ್ಪಡಬಾರದು ಎಂದು ತೋರುತ್ತದೆ" ಎಂದು ಹೇಳುತ್ತಾರೆ.[3] ಅವರ ಅಪ್ಪಣೆಯಿಂದ, ರೋಮನ್ ಕಥೋಲಿಕ ಸಭೆಯು ಅಧಿಕೃತ - ವ್ಯಾಖ್ಯಾನ ಎಂದು ಮನ್ನಣೆ ಹೊಂದಿದೆ.

ಪೇತ್ರನು ನಿಜವಾಗಿ ಏನು ಹೇಳುತ್ತಿದ್ದನು? ಅವನು ಪರಿಶುದ್ಧ ಬರಹಗಳ ಅರ್ಥವನ್ನು ಪರೀಕ್ಷಿಸುವದರ ಬಗ್ಗೆ ಮಾತಾಡುತ್ತಿದ್ದಿಲ್ಲ. ಆದರೆ ಪರಿಶುದ್ಧ ಬರಹಗಳು ಹೇಗೆ ಬಂದವು ಎಂಬುದರ ಬಗ್ಗೆ ಮಾತಾಡುತ್ತಿದ್ದನು. ಅವು ಬರಹಗಾರನ ಸ್ವಂತ ವಿಚಾರದಲ್ಲಿ ಹುಟ್ಟಿಬರಲಿಲ್ಲ. (ಮಾಹಿತಿಯು ಅವನ ವೈಯಕ್ತಿಕ ಬಿಚ್ಚುವಿಕೆಯಿಂದ: [*Gk.: epilusis*] ಯಾವುದೇ ಸಮಯದಲ್ಲಿ ಯಾವುದೇ ಪರಿಶುದ್ಧ ಬರಹವು ಬರಹಗಾರನ ಸ್ವಂತ ಚಿತ್ತದೊಳಗಿಂದ ಹೊರಗೆ ಬರಲಿಲ್ಲ; ಆದರೆ ಬರೆಯುವದಕ್ಕೆ ಜನರು ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟರು. ಆದುದರಿಂದ, ಪೇತ್ರನ ವಿಚಾರವು ಪರಿಶುದ್ಧ ಬರಹಗಳ ದೈವಿಕ ಪ್ರೇರಣೆಯಾಗಿತ್ತು. ಯಾವುದೇ ಮಾನವ ಮೂಲಕ್ಕೆ ವಿರುದ್ಧವಾದದ್ದಾಗಿತ್ತು.

ಪೇತ್ರನು ಬೈಬಲನ್ನು ಒಂದು ಶ್ರೇಣಿಯಲ್ಲಿ ಇಟ್ಟನು. ಅದು ಕೇವಲ ಒಂದು ಪುಸ್ತಕ ವಾಗಿರಲಿಲ್ಲ; ಅದು ಪುಸ್ತಕಗಳ ಪುಸ್ತಕವಾಗಿರುವುದು. ಹಾಗೆ ಬೈಬಲು ಅರ್ಥಮಾಡಿ ಕೊಳ್ಳಲ್ಪಟ್ಟಾಗ ಮಾತ್ರವೇ ಅದಕ್ಕೆ ಅದರ ಸರಿಯಾದ ಸ್ಥಾನವಿರುವುದು ಮತ್ತು ಮನುಷ್ಯನ ಹೃದಯಗಳಲ್ಲಿ ಅದು ತನ್ನ ಒತ್ತಡವನ್ನು ಪ್ರಯೋಗಿಸಬಹುದು.

ಇನ್ನೊಂದು ಮಹತ್ವದ ವಾಕ್ಯಭಾಗವು "ಪ್ರತಿಯೊಂದು (ಒಂದೊಂದು) ಬರಹವು" ಪರಿಶುದ್ಧ ಬರಹಗಳಲ್ಲಿ ದೇವರಿಂದ ಉಸುರಿಸಲ್ಪಟ್ಟದ್ದು (*Gk.: theopneustos*) ಎಂದು ಪೌಲನು ಹೇಳಿದ್ದು. ಮಾನವ ಬರಹಗಳು ಮಾನವನಿಂದ ಉಸುರಿದವುಗಳು (*Gk.: anthropneustos*). ನಿಜವಾಗಿಯೂ ಪರಿಶುದ್ಧ ಬರಹಗಳು "ಪ್ರೇರಿತವಾದವುಗಳು" ಎಂಬ ಭಾಷಾಂತರವು ಯಾವುದನ್ನಾದರೂ ಅಪೇಕ್ಷಿಸಲು ಬಿಡುತ್ತದೆ. "Inspire" ಎಂಬ ಪದವು ಲ್ಯಾಟಿನ್ ಭಾಷೆಯಿಂದ ಬಂದದ್ದು. "ಉಸಿರು ತೆಗೆದು ಕೋ" ಎಂದರ್ಥವಾಗುತ್ತದೆ. ಸತ್ತ ಪುಸ್ತಕಗಳ ಒಂದು ಗುಂಪಿನಲ್ಲಿ ದೇವರು ಉಸಿರು ಬಿಡಲಿಲ್ಲ. ಆದರೆ ಪುಸ್ತಕಗಳು ದೇವರ ಉಸಿರಿನಿಂದ ಅಸ್ತಿತ್ವಕ್ಕೆ ಬಂದವು: ಅವು ದೇವರಿಂದ ಉಸಿರಲ್ಪಟ್ಟವುಗಳು. ವಿರೋಧವಾದ ರೀತಿಯಲ್ಲಿ, ಸತ್ತಮಣ್ಣಿನ ದೇಹವು ದೇವರಿಂದ ಒಳಗೆ ಉಸಿರಲ್ಪಟ್ಟಿತ್ತು ಹಾಗೂ ಆದಾಮನು ಜೀವಿಸಲು ಪ್ರಾರಂಭಿಸಿದನು: ಆದರೆ ಬೈಬಲು ಆ ರೀತಿಯಲ್ಲಿ ಜೀವಂತವಾಗಿರುವುದಿಲ್ಲ. ಜೀವಿಸುವವುಗಳಾಗುವಂತೆ, ಬಲವುಳ್ಳವುಗಳಾಗುವಂತೆ ದೇವರು ಒಳಗೆ ಉಸುರಿದ  ಯಾವುದೇ ಸತ್ತಪುಸ್ತಕಗಳ ದೇಹವಿರಲಿಲ್ಲ. ದೇವರ ಉಸಿರು, ಆತನ ಪರಿಶುದ್ಧಾತ್ಮನು ಪುಸ್ತಕಗಳನ್ನು ಅಸ್ತಿತ್ವಕ್ಕೆ ತಂದನು ಹಾಗೂ ಅವು ಅಸ್ತಿತ್ವಕ್ಕೆ ತರಲ್ಪಟ್ಟಾಗ ಜೀವಿಸುವವುಗಳೂ ಬಲವುಳ್ಳವುಗಳೂ ಆದವು. ಬೈಬಲು "ಪ್ರೇರೇಪಿಸಲ್ಪಟ್ಟಿದೆ" ಎಂದು ಹೇಳುವುದು 2 ತಿಮೊಥೆ 3:16ರಲ್ಲಿ *theopneustos* ಸಂಪೂರ್ಣವಾಗಿ ಖಚಿತವಾದ ಭಾಷಾಂತರವಾಗಿರುವದಿಲ್ಲ.

ಉನ್ನತ ಮಟ್ಟದಲ್ಲಿ ಬೈಬಲ್ ಪ್ರೇರೇಪಣೆಯು (ಸಾಕಷ್ಟಾಗಿರದ ಆ ಪದವನ್ನು) ಉಪಯೋಗಿಸಲು ದೇವರ ಉಸಿರುವಿಕೆಯಾಗಿದೆ. ದೇವರ ಕರ್ತೃತ್ವದ ಪುಸ್ತಕದ ವಿಚಾರವನ್ನು ಸುವಾರ್ತೆಯ ಪ್ರಸಂಗಿಗಳು ಕೇಳುಗರ ಹೃದಯಗಳಲ್ಲಿ ನೆಡುವದರಿಂದ ಅವರಿಗೆ ಒಂದು ಪವಿತ್ರವಾದ ಸೇವೆ ಮಾಡುವರು. "ಕರ್ತನ ಆತ್ಮವು ನನ್ನಿಂದ ಮಾತಾಡಿತು" ಹಾಗೂ "ಆತನ ವಾಕ್ಯವು ನನ್ನ ನಾಲಿಗೆಯ ಮೇಲೆ ಇತ್ತು" ಎಂದು  ಒಬ್ಬ ಬೈಬಲ್ ಬರಹಗಾರನು ಹೇಳಿದ್ದಾನೆ (2 ಸಮೂವೇಲ 23:2).

## ವೈಯಕ್ತಿಕ ದೇವರು

ವಾಕ್ಯದ ಪ್ರತಿಯೊಬ್ಬ ಸೇವಕನು ಚರ್ಚಿಸಲು ಅವಕಾಶ ಹೊಂದಿದ ಇನ್ನೊಂದು ದೊಡ್ಡ ವಿಷಯ ವೈಯತ್ತಿಕ ದೇವರು. ವಿಶ್ವದ ಹಿಂದೆ ಬಲವಾದ ಸೃಷ್ಟಿಸುವ ಶಕ್ತಿಯು ಇರುವುದು ಅಷ್ಟೇ ಅಲ್ಲ ಆದರೆ ಆ ಶಕ್ತಿಯು ಒಬ್ಬ ವ್ಯಕ್ತಿಯಲ್ಲಿ ವಾಸಿಸುತ್ತದೆ. "ಕಿವಿಮಾಡಿದವನು ಕೇಳನೆ? ಕಣ್ಣು ಕೊಟ್ಟವನು ನೋಡನೋ?" (ಕೀರ್ತನೆ 94:9). ಮಾನವ ವ್ಯಕ್ತಿತ್ವವನ್ನು ಸೃಷ್ಟಿಸಿದವನು ದೈವೀಯ ವ್ಯಕ್ತಿಗಿಂದ ಕಡಿಮೆಯಾದವನಾಗಿರುವದಿಲ್ಲ. ಆತನು ಯೋಚಿಸುತ್ತಾನೆ (ಯೆಶಾಯ 55:8); ಆತನು ತಿಳಿದುಕೊಳ್ಳುತ್ತಾನೆ (ವಿಮೋಚನಕಾಂಡ 3:7); ಆತನು ಜ್ಞಾಪಿಸಿಕೊಳ್ಳುತ್ತಾನೆ (ವಿಮೋಚನಕಾಂಡ 6:5); ಆತನು ಪ್ರೀತಿಸುತ್ತಾನೆ (ಯೋಹಾನ 3:16); ಆತನು ಕೋಪಿಸಿಕೊಳ್ಳಬಹುದು (ಕೀರ್ತನೆ 103:8); ಆತನು ಈ ಮಾನವ ಗುಣಲಕ್ಷಣಗಳನ್ನು ಹೊಂದಿದ್ದರೂ ಆತನು ಮಾಂಸ, ಎಲುಬುಗಳಲ್ಲಿ (ಲೂಕ 24:39). ಆತನು ಆತ್ಮನು (ಯೋಹಾನ 4:24) ಮತ್ತು ಮರಣಕ್ಕೆ ಒಳಪಟ್ಟವನಲ್ಲ (1 ತಿಮೊಥೆ 1:17; 6:16). ಜೀವವನ್ನು ಪ್ರೀತಿಸುವವನೂ ಸಮಾಧಿಯಲ್ಲಿ ಇಲ್ಲವಾಗಿ

ಹೋಗುವದನ್ನು ಬಯಸದವನೂ ತನ್ನ ಸೃಷ್ಟಿಕರ್ತನು (ಪ್ರಸಂಗಿ 12:1) ತನ್ನ ನಿತ್ಯನಾದ ರಕ್ಷಕನಾಗಿರಲು ಶಕ್ತನಾಗಿರುವನೆಂದು (1 ತಿಮೊಥೆ 1:1) ಆನಂದಿಸುವನು, ಮೆಚ್ಚಿ ಕೊಳ್ಳುವ ಮರ್ತ್ಯನು ತನ್ನ ಪ್ರಾಣದ ಆಳದಿಂದ ಹಾಡತಕ್ಕದ್ದು: "ದೇವರಾದ ಕರ್ತನು ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು ಆತನು ಸರ್ವ ಶಕ್ತನು. ವರ್ತಮಾನ, ಭೂತ, ಭವಿಷತ್ಕಾಲಗಳಲ್ಲಿ ಇರುವಾತನು" (ಪ್ರಕಟನೆ 4:8). ವಾಕ್ಯವನ್ನು ಪ್ರಸಂಗಿಸುವವನು ತನ್ನ ಕೇಳುಗರನ್ನು ಅವರ ಪರಲೋಕದ ತಂದೆಯೊಂದಿಗೆ ಸಂಪರ್ಕದಲ್ಲಿ ತರುವದಕ್ಕೆ ಮತ್ತು ಆತನೊಂದಿಗೆ ಅವರು ಸದಾಕಾಲವೂ ಜೀವಿಸಲು ಬಯಸುವಂತೆ ಮಾಡಲು ಬಹಳ ವಿಷಯಗಳುಳ್ಳವರಾಗಿರುವರು.

**ದೇವರ ಕುಮಾರ**

ತಿಮೊಥೆಯನಿಗೆ ಪೌಲನು ಕೊಟ್ಟ ಆಜ್ಞೆಯನ್ನು ಕಾರ್ಯರೂಪಕ್ಕೆ ತರುವವರಿಂದ ಬೆಳಿಸಲ್ಪಟ್ಟ ಮುಖ್ಯ ವಿಷಯಗಳಲ್ಲಿ ಒಂದು, ಮನುಷ್ಯ ಕುಮಾರರಿಗಿಂತ ಹೆಚ್ಚು ಸುಂದರನೂ ಕೃಪೆಯು ಸುರಿಸಲ್ಪಟ್ಟ ತುಟಿಗಳುಳ್ಳವನೂ ಆಗಿರುವಾತನನ್ನು ನೋಡು ವಂತೆ ಜನರನ್ನು ಬಿಡುವುದು (ಕೀರ್ತನೆ 45:2). ಈ ವ್ಯಕ್ತಿಯ ಬಗ್ಗೆ ತಂದೆಯು ಮೆಚ್ಚಿಕೆಯುಳ್ಳವನು. ತಂದೆಯು ಆತನನ್ನು ಪ್ರೀತಿಸುವನು (ಮತ್ತಾಯ 3:17). ಯೇಸುವಿನ ದೈವತ್ವದ ಪುರಾವೆಯು ಆತನ ಜನನಕ್ಕಿಂತ ನೂರಾರು ವರ್ಷಗಳ ಮೊದಲು ಬರೆಯಲ್ಪಟ್ಟ[4] ಹಳೇ ಒಡಂಬಡಿಕೆಯ ಮುಂತಿಳಿಸುವಿಕೆಗಳನ್ನು ಆತನು ಮೊದಲು ನೆರವೇರಿಸಿದ್ದರಿಂದ ಮೊದಲು ಬರುತ್ತದೆ (ಅಪೊಸ್ತಲರ ಕೃತ್ಯ 17:2, 3), ಆತನ ಸರಿಗಟ್ಟಲಾಗದ ಪ್ರಸಂಗಗಳು ಎರಡು ಸಾವಿರ ವರ್ಷಗಳ ಹಿಂದೆ ಕೇಳುಗರನ್ನು ಚಕಿತಗೊಳಿಸಿದವು (ಮತ್ತಾಯ 13:54), ಹಾಗೂ ಅವುಗಳಿಗೆ ಸರಿಸಮಾನವಾ ದವುಗಳು ಇನ್ನೂ ಕಂಡುಬಂದಿಲ್ಲ. ಆತನ ಸ್ವಾರ್ಥ ರಹಿತತೆ; ಆತನ ಸ್ವಾರ್ಥ - ತ್ಯಾಗ; ಆತನ ದಯೆಯ ಹೃದಯ; ಮಹಿಳೆಯರ, ಮಕ್ಕಳ ಮತ್ತು ಪಾಪಿಗಳ, ಬಹಿಷ್ಕೃತರ ಬಗ್ಗೆ ಆಸಕ್ತಿ - ಈ ಎಲ್ಲಾ ಗುಣಲಕ್ಷಣಗಳು ಹಾಗೂ ಹೆಚ್ಚಾದವುಗಳು ಯೇಸುವಿನ "ಅಮೂಲ್ಯ ಮೌಲ್ಯಗಳನ್ನು" ಗುರುತಿಸಲು ಕಾರಣವಾಗುವವು (1 ಪೇತ್ರ 2:6, 7). ನಜರೇತಿ ನವನು ದೀನನಂತೆ ಪ್ರಸಂಗಿಸಲ್ಪಡುವಾಗ, ಹೆಚ್ಚಾದ ಜನರು, "ಯೇಸು ನಮಗೆಂಥ ಮಿತ್ರ" ಎಂದು ಹೇಳುವರು.

**ರಕ್ಷಣೆಯ ಯೋಜನೆ**

ಬೈಬಲ್ ಪ್ರೇರಣೆ, ಆಸ್ತಿಕವಾದ ಹಾಗೂ ಯೇಸುವಿನ ದೇವತ್ವದ ಬಗ್ಗೆ ಅಸ್ತಿವಾರ ಶಿಲೆಗಳನ್ನು ಎಷ್ಟು ಭದ್ರವಾಗಿ ಹಾಕಿದ್ದರೂ ಒಬ್ಬ ಪ್ರಸಂಗಿಯು ರಕ್ಷಣೆಯ ಸುವಾರ್ತಾ ಯೋಜನೆಯನ್ನು ತನ್ನ ಮುಂದಿಟ್ಟು ಕೊಳ್ಳದಿದ್ದರೆ ಅವನು ತನ್ನ ಸಮಯವನ್ನು ಹಾಳು ಮಾಡಿಕೊಳ್ಳುತ್ತಿರುವನು. ಅವನು ತನ್ನ ಪಾಪಗಳಿಂದ ರಕ್ಷಣೆಯನ್ನು ಹೊಂದಿಕೊಳ್ಳಲು ಏನು ಮಾಡಬೇಕೆಂಬುದನ್ನು ತಿಳಿಯದಿದ್ದರೆ ಆತ್ಮನಿಂದ ಉಸುರಿಸಲ್ಪಟ್ಟ ಬೈಬಲಿನ ಬಗ್ಗೆ, ವೈಯಕ್ತಿಕ ದೇವರ ಬಗ್ಗೆ ಮತ್ತು ದೇವ ಮನುಷ್ಯ ಯೇಸುವಿನ ಬಗ್ಗೆ ತಿಳಿಯುವುದು ಸಹಾಯ ಮಾಡಲಾರದು. ಯೇಸುವು ಲೋಕದೊಳಗೆ ರಕ್ಷಕನಾಗಿ ಬಂದನು (ಲೂಕ 19:10; 1 ತಿಮೊಥೆ 1:15). ಆದರೆ ಶರತ್ತುಗಳಿಲ್ಲದೆ ಆತನು ರಕ್ಷಿಸುವದಿಲ್ಲ (ಲೂಕ 6:46). ಹೆಚ್ಚಾದವರು ಕಳೆದು ಹೋಗುವದರಿಂದ (ಮತ್ತಾಯ 7:13, 14), ಪ್ರಾಣಗಳನ್ನು ಪ್ರೀತಿ ಸುವ ಪ್ರಸಂಗಿಯು, ರಕ್ಷಿಸಲ್ಪಡಲು ಏನು ಮಾಡಬೇಕೆಂದು ಪಾಪಿಗಳಿಗೆ ತೋರಿಸಲು

ಯಾವಾಗಲೂ ಎಚ್ಚರವಾಗಿರಬೇಕು.

ರಕ್ಷಣೆಯ ಐದು - ಹೆಜ್ಜೆಯ ಯೋಜನೆಯ ಸಾರಾಂಶವನ್ನು ಕೆಲವರು ನ್ಯಾಯಶಾಸ್ತ್ರದ್ದೆಂದು ಖಂಡಿಸುತ್ತಾರೆ. ಆದರೆ ಅವರು ಪ್ರಾಣಗಳನ್ನು ರಕ್ಷಿಸುವದಕ್ಕೆ ಸಹಾಯ ಮಾಡುವದಿಲ್ಲ. ಕೆಲವರು ಕೇವಲ ತಮ್ಮ ತುಟಿಗಳಿಂದ ಅರಿಕೆ ಮಾಡುವರು ಎಂಬುದು ಸತ್ಯವಾಗಿದೆ. ಕೆಲವರು ಮುಳುಗೇಳಿಸಲ್ಪಟ್ಟಿದ್ದಾರೆ ಆದರೆ ಕೇವಲ ಒದ್ದೆಯಾಗಿದ್ದಾರೆ. ಹೀಗಿದ್ದರೂ ತನ್ನ ಸ್ವೀಕಾರವನ್ನು ಹೊಂದಿಕೊಳ್ಳಲಿಕ್ಕೆ ಐದು ಮಾನವ ಹೆಜ್ಜೆಗಳನ್ನು ದೇವರು ಕೇಳುತ್ತಾನೆಂಬ ಸಂಗತಿ ನಿಲ್ಲುತ್ತದೆ. ಯೇಸುವು ರಕ್ಷಣೆಯ ಒಂದೇ ಯೋಜನೆ ಯಾಗಿದ್ದಾನೆ ಎಂದು ಕೆಲವರು ಹೇಳುವಾಗ, ಅವರು ಆ ಮಾತನ್ನು ದುರಪಯೋಗ ಪಡಿಸಿಕೊಳ್ಳುತ್ತಾರೆ. ಯೇಸುವು ಮಾರ್ಗವಾಗಿದ್ದಾನೆ; ಹೀಗೆ ದೇವರ ಯೋಜನೆಯಲ್ಲಿ ಪ್ರಮುಖ ಪಾತ್ರಧಾರಿಯಾಗಿದ್ದಾನೆ (ಯೋಹಾನ 14:6); ಆದರೆ ಯೇಸುವು ಒಬ್ಬನೇ ಯಾರನ್ನೂ ರಕ್ಷಿಸುವದಿಲ್ಲ. ಜೀವವು ನಂಬುವವರೊಂದಿಗುರುವುದು, ಹಾಗೂ ಕೋಪವು ಅವಿಧೇಯರಾಗುವವರೊಂದಿಗಿರುವುದು ಎಂದು ಯೋಜನೆಯು ಹೇಳುತ್ತದೆ (ಯೋಹಾನ 3:36). ವಿಧೇಯರಾಗುವವರನ್ನು ಮಾತ್ರವೇ ಆತನು ರಕ್ಷಿಸುವನು (ಇಬ್ರಿಯ 5:9) ಹಾಗೂ ವಿಧೇಯತೆಯು ಹೆಜ್ಜೆ ಹೆಜ್ಜೆಯ ಪ್ರಗತಿಯಾಗಿದೆ.

ಮೊದಲನೆಯ ಹೆಜ್ಜೆಯು ಪ್ರಸಂಗಿಯ ವಾಕ್ಯವನ್ನು ಕೇಳಲು ಸಿದ್ಧನಾಗಿರುವುದು. ಯಾಕಂದರೆ ಕೆಲವು ಜನರು ಕೇಳುವದರಲ್ಲಿ ಮಂದರಾಗಿರುವರು (ಮತ್ತಾಯ 13:15). ಹಾಗೂ ಎಂದಿಗೂ ರಕ್ಷಿಸಲ್ಪಡುವದಿಲ್ಲ. "ಕಿವಿಯುಳ್ಳವನು ಕೇಳಿಸಿಕೊಳ್ಳಲಿ" (ಮತ್ತಾಯ 13:9). ತಮ್ಮ ಕಿವಿಗಳನ್ನು ಮುಚ್ಚಿಕೊಳ್ಳುವವರನ್ನು ಯೇಸುವಿನ ಶಕ್ತಿಯೂ ರಕ್ಷಿಸಲಾರದು (ಅಪೊಸ್ತಲರ ಕೃತ್ಯ 7:57).

ಎರಡನೆಯ ಹೆಜ್ಜೆಯು ಯೇಸುವಿನ ಬಗೆಗಿನ ಸಂದೇಶದಲ್ಲಿ ಹೃದಯ ಪೂರ್ವಕ ಭರವಸೆಯಿಡುವುದು. ಆತನು, "ದೇವರು ನಮ್ಮೊಂದಿಗಿದ್ದಾನೆ," ಇಮ್ಮಾನುವೇಲನು, ಸಹೋದರನಿಗಿಂತ ಹೆಚ್ಚು ನಿಕಟವಾಗಿ ಹೊಂದಿಕೊಳ್ಳುವ ಸ್ನೇಹಿತ ಎಂಬ ಯಥಾರ್ಥವಾದ ನಂಬಿಕೆ (ಅಪೊಸ್ತಲರ ಕೃತ್ಯ 16:31; ಯೋಹಾನ 20:30, 31). "ವಿಶ್ವಾಸ ಮಾತ್ರವೇ" ಎಂಬುದು ಕ್ರೈಸ್ತನನ್ನಾಗಲೀ (ಯಾಕೋಬ 2:24) ಕ್ರೈಸ್ತೇತರನನ್ನಾಗಲೀ (ಯೋಹಾನ 12:42), ಯಾರನ್ನಾಗಲೀ ಎಂದೂ ರಕ್ಷಿಸುವದಿಲ್ಲ. ಹೆಜ್ಜೆ ಎರಡು ಅವಶ್ಯವಾದದ್ದು (ಯೋಹಾನ 8:24), ಆದರೆ ಅದೊಂದೇ ಅವಿಶ್ವಾಸಕ್ಕಿಂತಲೂ ಹೆಚ್ಚು ಕೆಟ್ಟದ್ದಾಗಿದೆ.

ಮೂರನೆಯ ಹೆಜ್ಜೆಯು ಹೃದಯದಲ್ಲಿರುವದನ್ನು ಬಾಯಿಂದ ಒಪ್ಪಿಕೊಳ್ಳುವುದು: "ಯೇಸು ಕ್ರಿಸ್ತನು ದೇವರ ಕುಮಾರನು ಎಂದು ನಂಬುತ್ತೇನೆ" (ಅಪೊಸ್ತಲರ ಕೃತ್ಯ 8:37; ನೋಡಿರಿ 1 ಯೋಹಾನ 4:15; ಮತ್ತಾಯ 16:16). ಪಾಪಿಯು "ಒಳ್ಳೇ ಅರಿಕೆ ಮಾಡುವಾಗ" (1 ತಿಮೊಥೆ 6:13) ಅವನು ಪಾಪಿಯ ಹೆಸರನ್ನು ತಂದೆಗೆ ಅರಿಕೆ ಮಾಡುವನು (ಮತ್ತಾಯ 10:32). ನಿಜವಾದ ವಿಶ್ವಾಸಿ ಕರ್ತನಾದ ಯೇಸುವನ್ನು ಬಾಯಿಂದ ಅರಿಕೆ ಮಾಡಲು (ರೋಮಾಪುರ 10:9, 10) ನಾಚಿಕೆ ಪಡುವದಿಲ್ಲ (ಮಾರ್ಕ 8:38) ಇಲ್ಲವೇ ಭಯಪಡುವದಿಲ್ಲ (ಯೋಹಾನ 12:42).

ನಾಲ್ಕನೆಯ ಹೆಜ್ಜೆಯು ಒಬ್ಬನ ಮನಸ್ಸಿನಲ್ಲಿ ಬದಲಾವಣೆ, ಸಾಮಾನ್ಯವಾಗಿ ಒಂದು ಕಾರ್ಯ ಮಾನಸಾಂತರ ಎಂದು ಕರೆಯಲ್ಪಟ್ಟಿದೆ. ಯೇಸುವಿನಲ್ಲಿಯ ಅವನ ಹೊಸ ವಿಶ್ವಾಸದಿಂದ ಪರಿಣಾಮಗೊಳ್ಳುವ ಒಬ್ಬನ ಯೋಜನೆಯ ಪರಿವರ್ತನೆಯಾಗಿದೆ. ಹಿಂದಿನ ನಿಷ್ಠೆಗಳನ್ನು (ಅದು ಹಣಕ್ಕಾಗಿರಬಹುದು, ವಿಗ್ರಹಗಳಿಗಾಗಿರ ಬಹುದು ಇಲ್ಲವೇ ಮೊಹೆಮ್ಮದನಿಗಾಗಿರ ಬಹುದು) ಅವನು ತಿರಸ್ಕರಿಸಿ ಬಿಡುವನು ಮತ್ತು ಯೇಸುವನ್ನು

ತನ್ನ ಜೀವನದ ಕರ್ತನನ್ನಾಗಿ ಮಾಡಿಕೊಳ್ಳುವನು. ದೇವರ ಚಿತ್ತಾನುಸಾರವಾದ ದುಃಖವು ಮಾನಸಾಂತರಕ್ಕೆ ನಡಿಸುವುದು (2 ಕೊರಿಂಥ 7:10); ಅದು ಮನಸ್ಸಿನ ಬದಲಾವಣೆಯನ್ನು (*Gk.: metanoia*) ನಷ್ಟಕ್ಕೆ ಪರಿಹಾರ ಕೊಡಲ್ಪಡುವುದು ಹಿಂಬಾಲಿಸುವುದು (ಮತ್ತಾಯ 3:8). ಇದು ಬೈಬಲಿನಲ್ಲಿ ಅತೀ ಕಷ್ಟಕರವಾದ ಆಜ್ಞೆಯಾಗಿದೆ.[4] ರಕ್ಷಣೆಯ ಯೋಜನೆಯಲ್ಲಿ ಇದು ಪ್ರತ್ಯೇಕವಾದ ಹೆಜ್ಜೆಯಾಗಿರುವುದು ಯಾವುದೇ ಪಶ್ಚಾತ್ತಾಪವಿಲ್ಲದೇ ಒಬ್ಬನಿಗೆ ವಿಶ್ವಾಸವಿರಬಹುದು ಎಂಬುದು ಸ್ಪಷ್ಟವಾಗಿದೆ (ಯಾಕೋಬ 2:18-20). ದೆವ್ವಗಳೂ ನಂಬುವವು, ಆದರೆ ಅವು ತಮ್ಮ ಮನಸ್ಸುಗಳನ್ನು ಇಲ್ಲವೇ ನಡತೆಯನ್ನು ಬದಲಾಯಿಸಿಕೊಳ್ಳುವದಿಲ್ಲ; ಅವು ಮಾನಸಾಂತರ ಪಡುವದಿಲ್ಲ. "Repent" ಎಂಬ ಇಂಗ್ಲೀಷ್ ಪದವು (*repoenitere* ಎಂಬ ಲ್ಯಾಟಿನ್ ಪದದಿಂದ ಬರುತ್ತದೆ "to be sorrowful") ಪರಿಶುದ್ಧಾತ್ಮನಿಂದ ಉಪಯೋಗಿಸಲ್ಪಟ್ಟ ಪದಕ್ಕೆ ಇದು ಒಳ್ಳೇ ಭಾಷಾಂತರವಾಗಿರುವದಿಲ್ಲ. (*Gk.: metanoeson,* "ಮನಸ್ಸನ್ನು ಬದಲಾಯಿಸು, ಮಾನಸಿಕ ದಿಕ್ಕುಗಳನ್ನು ಬದಲಾಯಿಸು.") *Metanoia* ನಿಜವಾದ ಮಾನಸಾಂತರವನ್ನು ಕೈಕೊಳ್ಳಲು ದುಃಖಕ್ಕಿಂತ ಹೆಚ್ಚಾದದ್ದು ಬೇಕಾಗುತ್ತದೆ.

ಐದನೆಯ ಹೆಜ್ಜೆಯು ನೀರಿನಲ್ಲಿ ಮುಳುಗೇಳಿಸುವುದು (ಅಪೊಸ್ತಲರ ಕೃತ್ಯ 10:47, 48). ಬಾಪ್ತಿಸ್ಮದಲ್ಲಿಯೇ ಯಾವುದೇ ಬೆಲೆಯು ಇರುವದಿಲ್ಲ, ಕೊಳೆಯನ್ನು ದೇಹದಿಂದ ತೊಳೆಯುವುದೂ ಇಲ್ಲ (1 ಪೇತ್ರ 3:21). ಹೀಗಿದ್ದರೂ ದೇವರ ಯೋಜನೆಯಲ್ಲಿ ಅದು ಅತಿಶಯವಾಗಿ ಪ್ರಾಮುಖ್ಯವಾದದ್ದಾಗಿದೆ. ಅದು ಕ್ರಿಸ್ತನ ಒಳಗೆ ಇಲ್ಲವೇ ಹೊರಗೆ ಇರುವದರ (ಗಲಾತ್ಯ 3:27) ಕ್ರಿಸ್ತನ ದೇಹದ ಒಳಗೆ ಇಲ್ಲವೇ ಹೊರಗೆ ಇರುವದರ (1 ಕೊರಿಂಥ 12:13) ಮಧ್ಯದಲ್ಲಿಯ ಭಿನ್ನತೆಯಾಗಿದೆ. ಬಾಪ್ತಿಸ್ಮವಿಲ್ಲದೇ ಪಾಪಗಳ ಪರಿಹಾರವಿಲ್ಲ (ಅಪೊಸ್ತಲರ ಕೃತ್ಯ 2:38). ಆದರೆ ಈ ಆಜ್ಞೆಗೆ ವಿಧೇಯತೆಯ ಮುಖಾಂತರ ಆತ್ಮವು ಶುದ್ಧೀಕರಿಸಲ್ಪಡುತ್ತದೆ (1 ಪೇತ್ರ 1:22). ಬಾಪ್ತಿಸ್ಮವಿಲ್ಲದೇ ಒಬ್ಬನ ಹೊಸದಾಗಿ ಹುಟ್ಟುವಿಕೆಯು ಪೂರ್ತಿಗೊಳ್ಳುವದಿಲ್ಲ (ಯೋಹಾನ 3:5). ಈ ಪುನರ್ಜನ್ಮದ ತೊಳೆಯುವಿಕೆಯು (ತೀತ 3:5) ಹೃದಯದಿಂದ ಉಕ್ಕಿ ಬರತಕ್ಕದ್ದು (ರೋಮಾಪುರ 6:17). ಇಲ್ಲದಿದ್ದರೆ ಅದು ಕಪಟವಾದ ನಾಯ್ಯಶಾಸ್ತ್ರ ಹಾಗೂ ನಟನೆಯಾಗುತ್ತದೆ. ಅದು ಲೋಕದ ಮತ್ತು ಸಭೆಯ ಮಧ್ಯದಲ್ಲಿ ವಿಭಾಗಿಸುವ ಗೆರೆಯಾಗಿದೆ. ಅಂಧಕಾರದ ದೊರೆತನದಿಂದ ದೇವರ ಪ್ರಿಯ ಕುಮಾರನ ರಾಜ್ಯದೊಳಗೆ ವರ್ಗವಾಗುವ ಮಧ್ಯಕಾಲವಾಗಿದೆ (ಕೊಲೊಸ್ಸೆ 1:13). ಬಾಪ್ತಿಸ್ಮವು ಬಹಳ ಮುಖ್ಯವಾದದ್ದು. ಯಾರೇ ಒಬ್ಬನು ಕ್ರಿಸ್ತನಲ್ಲಿ ವಿಶ್ವಾಸಕ್ಕೆ ಬರುವಾಗ ಬಾಪ್ತಿಸ್ಮ ಹೊಂದುವ ವರೆಗೆ ತಿನ್ನುವದಕ್ಕೂ, ಕುಡಿಯುವದಕ್ಕೂ ಸಮಯಕೊಟ್ಟ ಯಾವುದೇ ಉದಾಹರಣೆಯಿಲ್ಲ. ಒಬ್ಬನು ವಿಶ್ವಾಸಿಯಾದ ತಾಸಿನಲ್ಲಿಯೇ, ಮಧ್ಯರಾತ್ರಿಯಲ್ಲಿಯೂ ಸಹ ಬಾಪ್ತಿಸ್ಮ ಮಾಡಿಸಲ್ಪಟ್ಟನು (ಅಪೊಸ್ತಲರ ಕೃತ್ಯ 16:33). ಬಾಪ್ತಿಸ್ಮ ಮಾಡಿಸಿಕೊಂಡವರು ಕ್ರೈಸ್ತರಲ್ಲ ಆದರೆ ಪಾಪಿಗಳು. ಬಾಪ್ತಿಸ್ಮವು ಜನರನ್ನು ಕ್ರೈಸ್ತರನ್ನಾಗಿ ಮಾಡಿತು.

ರಕ್ಷಣೆಯ ಯೋಜನೆಯಲ್ಲಿ ಪಾಪಿಗಳಿಗಾಗಿ ಐದು ಹೆಜ್ಜೆಗಳು ಅರ್ಹತೆಯ ಕಾರ್ಯಗಳಲ್ಲ. ಅವು ಒಬ್ಬನ ರಕ್ಷಣೆಗಳಿಸುವದಿಲ್ಲ. ಕರ್ತನ ರಕ್ತವು ಮಾತ್ರವೇ ಪಾಪಗಳನ್ನು ತೊಳೆಯುತ್ತದೆ (ಪ್ರಕಟನೆ 1:5; 5:9, 10). ಆದರೆ ವಿಧೇಯತೆಯ ಎಲ್ಲಾ ಐದೂ ಹೆಜ್ಜೆಗಳನ್ನು ಪಾಪಿಯು ಪೂರೈಸುವ ವರೆಗೆ ಆ ರಕ್ತವು ಪಾಪವನ್ನು ತೊಳೆಯುವದಿಲ್ಲ (ನೋಡಿರಿ ಅಪೊಸ್ತಲರ ಕೃತ್ಯ 22:16). ಹೆಜ್ಜೆಯ ನಂತರ ಹೆಜ್ಜೆಯ ಯೋಜನೆಯನ್ನು ತಿರಸ್ಕರಿಸುವವರು ಇಲ್ಲವೇ ಐದು ಯೋಜನೆಗಳಲ್ಲಿ ಯಾವುದನ್ನಾದರೂ ಬಿಟ್ಟುಬಿಡುವವರು ದೇವರ ಇಡೀ ಅಲೋಚನೆಯನ್ನು ಘೋಷಿಸುವದಿಲ್ಲ ಆದರೆ ಜನರನ್ನು ಅಡ್ಡ ಮಾರ್ಗಕ್ಕೆ ನಡಿಸುತ್ತಾರೆ.

**ಸಭೆ**

ಸುಮಾರು ಕ್ರಿ.ಶ. 62ರಲ್ಲಿ ಪೌಲನು ಎಫೆಸದಲ್ಲಿಯ ಸಭೆಗೆ ಒಂದು ಪತ್ರ ಬರೆದನು. ಆ ಪತ್ರಿಕೆಯು ಬಹಳ ಗೌರವಿಸಲ್ಪಟ್ಟು ಭದ್ರವಾಗಿ ಬಚ್ಚಿಡಲ್ಪಟ್ಟಿತು. ಒಂದು ರೀತಿಯ ಸಭೆಯ ವಾಚನಾಲಯದಲ್ಲಿ ಅದು ನಿಶ್ಚಯವಾಗಿಯೂ ಇಡಲ್ಪಟ್ಟಿತು. ಕ್ರಿ.ಶ. 63ರಲ್ಲಿ ಸ್ಥಳಿಕ ಪ್ರಸಂಗಿಯಾಗಲು ಬಂದಾಗ ಅದು ಅಲ್ಲಿ ತಿಮೊಥೆಯನಿಗೆ ಇತ್ತು. ಆ ಪತ್ರವನ್ನು ಓದುವ ಯಾರೇ ಆಗಲಿ ದೇವರ ಯೋಜನೆಯಲ್ಲಿ ಸಭೆಯು ಮಹತ್ವದ್ದಾಗಿದೆ ಎಂಬ ತೀರ್ಮಾನಕ್ಕೆ ಬರುವರು. ಸಭೆಯು ಕ್ರಿಸ್ತನ ಮದಲಗಿತ್ತಿಯಾಗಿರುವುದು (ಎಫೆಸ 5:25, 26). ನಿತ್ಯತ್ವದಿಂದ ಯೋಜಿಸಲ್ಪಟ್ಟ (ಎಫೆಸ 3:11) ಒಂದು ಸಂಸ್ಥೆಯಂತೆ ಪೌಲನ ಮಾತುಗಳು ಚಿತ್ರಿಸುತ್ತವೆ. ಪತ್ರವನ್ನು ಅಭ್ಯಾಸಮಾಡಿದ ನಂತರ ಮತ್ತು ವಾಕ್ಯವನ್ನು ಪ್ರಸಂಗಿಸ ಬೇಕೆಂದು ಪ್ರಬೋಧಿಸಲ್ಪಟ್ಟನಂತರ ತಿಮೊಥೆಯಂಥೆ ಪ್ರಸಂಗಿಯು ಕ್ರಿಸ್ತನ ಸಭೆಯನ್ನು ವರ್ಣಿಸುವ ವಿಚಾರಗಳೊಂದಿಗೆ ತುಂಬಿ ತುಳುಕುವನು. ವಾಕ್ಯವನ್ನು ಪ್ರಸಂಗಿಸುವ ಯಾರೇ ಆಗಲೀ ಸಭೆಯನ್ನು ಕಡೆಗಣಿಸಲಾರನು.

ಕ್ರಿಸ್ತನು ತನ್ನ ಸಭೆಯನ್ನು ರಕ್ಷಿಸಲು ಹಿಂದಿರುಗಿ ಬರಲಿಕ್ಕಿದ್ದುದರಿಂದ (ಎಫೆಸ 5:23) ಜನರನ್ನು ಪ್ರೀತಿಸುವ ಪ್ರಸಂಗಿಯು ಇತರರನ್ನು ಸಭೆಯಲ್ಲಿ ಜೀವಿಸಲು ಮತ್ತು ಸಾಯಲು ಪ್ರೇರೇಪಿಸಲಿಕ್ಕೆ ತನ್ನ ಬಲದಲ್ಲಿಯ ಪ್ರತಿಯೊಂದನ್ನು ಮಾಡುವನು. ನಿಜವಾಗಿ ಸಭೆಯು ತಾನೇ ರಕ್ಷಿಸಲಾರದು. ಯೇಸುವು ರಕ್ಷಕನು ಮತ್ತು ಸಭೆಯು ರಕ್ಷಿಸಲ್ಪಟ್ಟವರಿಂದ ಮಾಡಲ್ಪಟ್ಟಿದೆ, ದಿನದಿನವೂ ರಕ್ಷಣೆಯ ಯೋಜನೆಯಲ್ಲಿಯ ಐದು ಹೆಜ್ಜೆಗಳಿಗೆ ವಿಧೇಯನಾಗುವ ಪ್ರತಿಯೊಬ್ಬ ಪಾಪಿಯು ರಕ್ಷಿಸಲ್ಪಟ್ಟ ವ್ಯಕ್ತಿಯಾಗುವನು ಮತ್ತು ಅದೇ ಸಂಗತಿಯನ್ನು ಮಾಡಿದ ಜನರ ಗುಂಪಿಗೆ ಕರ್ತನು ಅವನನ್ನು ಸೇರಿಸುವನು (ಅಪೊಸ್ತಲರ ಕೃತ್ಯ 2:47). ನಂಬಿಕೆಯಲ್ಲಿ ಸ್ಥಿರವಾಗಿ ನಿಂತು ಮುಂದುವರಿಯುವವನು ಸುವಾರ್ತೆಯ ನಿರೀಕ್ಷೆಯನ್ನು ಬಿಟ್ಟುಬಿಡದವನು ಒಂದು ದಿನ ಕರ್ತನು ಹಿಂದಿರುಗಿ ಬರುವಾಗ ಪರಲೋಕಕ್ಕೆ ಒಯ್ಯಲ್ಪಡುವನು (ಕೊಲೊಸ್ಸೆ 1:23).

ಹೊಸ ಒಡಂಬಡಿಕೆಯಲ್ಲಿ ರಕ್ಷಿಸಲ್ಪಟ್ಟ ಜನರ ಗುಂಪು ಕ್ರಿಸ್ತನ ಮಂದೆಗೆ (ಯೋಹಾನ 10:16), ಕ್ರಿಸ್ತನ ದೇಹಕ್ಕೆ (ಕೊಲೊಸ್ಸೆ 1:18), ಕ್ರಿಸ್ತನ ರಾಜ್ಯಕ್ಕೆ (ಕೊಲೊಸ್ಸೆ 1:13), ಹಾಗೂ ದೇವರ ಕುಟುಂಬಕ್ಕೆ (ಗಲಾತ್ಯ 3:26; ರೋಮಾಪುರ 8:29) ಹೋಲಿಸಲ್ಪಟ್ಟಿದೆ. ಬೈಬಲಿನ ಪ್ರಕಾರ ಮಾತನಾಡುವದಾದರೆ ಅಸ್ತಿತ್ವದಲ್ಲಿರುವ ಸಭೆಗಳ ಸಂಖ್ಯೆಯು ಜಗತ್ತಿನಲ್ಲೆಲ್ಲಾ ಹರಡಿರುವ (ವೈಯಕ್ತಿಕ ಸ್ಥಳಿಕ ಸಭೆಗಳಲ್ಲ) "ಕ್ರಿಸ್ತನ ಮಂದೆಯ" ಹಾಗೂ "ಕ್ರಿಸ್ತನ ದೇಹದ" ಮತ್ತು "ಕ್ರಿಸ್ತನ ರಾಜ್ಯದ" ಹಾಗೂ "ದೇವರ ಕುಟುಂಬದ" ಸಂಖ್ಯೆಯಾಗಿರುತ್ತದೆ. ಕರ್ತನ ಸಭೆಯ ಅನೇಕ ಸದಸ್ಯರು ದೇಶದಲ್ಲೆಲ್ಲಾ ಚದರಿರುತ್ತಾರೆ. ಆದರೆ ಒಂದೇ ಒಂದು ದೇಹವಿರುವುದು (ನೋಡಿರಿ 1 ಕೊರಿಂಥ 12:20).

ಹೊಸ ಒಡಂಬಡಿಕೆಯ ಸಭೆಯು ಹೆಸರಿಲ್ಲದ ಸಂಸ್ಥೆಯಾಗಿದೆ. ಇಂಗ್ಲೀಷ್ ಬೈಬಲಿನಲ್ಲಿಯ "ಸಭೆ" ಇಲ್ಲವೇ "ಸಭೆಗಳು" ಎಂಬ ಪದವು 112 ಸಲ ಬರುತ್ತದೆ. ಅದರಲ್ಲಿ ತೊಂಭತ್ತೈದು ಸಲ "ಸಭೆ" ಇಲ್ಲವೇ "ಸಭೆಗಳು" ಎಂದು ಮಾತ್ರ ಕರೆಯಲ್ಪಟ್ಟಿದೆ. ಹನ್ನೆರಡು ಸಲ ಅದು "ದೇವರ ಸಭೆ" ಎಂದು ಕರೆಯಲ್ಪಟ್ಟಿದೆ. ಈ ಮಾತು ಒಡೆತನವನ್ನು ತೋರಿಸುತ್ತದೆ. ಅದೇ ರೀತಿಯ ಮಾತು "ಕ್ರಿಸ್ತನ ಸಭೆಗಳು" ಎಂಬುದು ಒಂದು ಸಲ (ರೋಮಾಪುರ 16:16) ಕಂಡು ಬರುತ್ತದೆ. ಒಂದು ಸಲ ಯೇಸು ಅದನ್ನು "ನನ್ನ ಸಭೆ" (ಮತ್ತಾಯ 16:18) ಎಂದು ಕರೆದನು. ಸದಸ್ಯರಾಗಿ ಮಾಡಲ್ಪಟ್ಟ ಜನರನ್ನು ವಿವರಿಸುವದಕ್ಕಾಗಿ (ಅನ್ಯರು, ದೇವ ಭಕ್ತರು, ಚೊಚ್ಚಲಾಗಿ ಹುಟ್ಟಿದವರು) ಆ ಪದವು ಇತರ ಮೂರು ಸಲ ಉಪಯೋಗಿಸಲ್ಪಟ್ಟಿದೆ (ರೋಮಾಪುರ 16:4; 1 ಕೊರಿಂಥ

14:33; ಇಬ್ರಿಯ 12:23). ಸಭೆಗೆ ಯಾವುದೇ ಹೆಸರು ಕೊಡಲ್ಪಟ್ಟಿಲ್ಲ. ಅದಕ್ಕೆ ಒಂದು ಹೆಸರನ್ನು ಕೊಡುವಲ್ಲಿ ಅದನ್ನು ಒಂದು ನಾಮದ ಮತವಾಗುವಂಥೆ ಮಾಡುವುದಾಗಿದೆ. ವೈಯಕ್ತಿಕ ಸದಸ್ಯನು ಕ್ರಿಸ್ತನ ಹೆಸರನ್ನು (1 ಪೇತ್ರ 4:16) "ಕ್ರಿಶ್ಚಿಯನ್" ಎಂಬ ಹೆಸರನ್ನು ಧರಿಸಿಕೊಳ್ಳುತ್ತಾನೆ. ಆದರೆ ಹೊಸ ಒಡಂಬಡಿಕೆಯ ಬರಹಗಾರರು ಎಂದೂ ಆತನ ಸಭೆಯನ್ನು ಕ್ರೈಸ್ತ ಸಭೆಯಂತೆ ಹೆಸರಿಸಿರುವದಿಲ್ಲ. ಯಾವುದೇ ಮನುಷ್ಯನು ಮಾತಾಡಿದರೆ, ದೇವರ ಮಾತುಗಳಂತೆ ಅವನು ಮಾತಾಡಲಿ (1 ಪೇತ್ರ 4:11). "ಕ್ರಿಸ್ತನ ಸಭೆಗಳ ಸಭೆ," "ಕ್ರಿಸ್ತನ ಸ್ಥಳಿಕ ಸಭೆಗಳ ಸಭೆ", "ಕ್ರಿಸ್ತ ಪ್ರಸಂಗಿಗಳ ಸಭೆ" ಇಲ್ಲವೇ "ನಾನು ಕ್ರಿಸ್ತರ ಸಭೆಯವನು" ಎಂದು ಹೇಳಬಾರದು. "ಭುಜಕ್ಕೆ ಭುಜ ಹಚ್ಚಿ" ನಾವು ಆತನ ಸೇವೆ ಮಾಡುವಂತೆ "ಶುದ್ಧೀಕರಿಸಲ್ಪಟ್ಟ ತುಟಿಗಳಿಗಾಗಿ" ನಾವು ಪ್ರಯಾಸ ಮಾಡೋಣ (ಚೆಫನ್ಯ 3:9).

**ಆರಾಧನೆ**

ದೇವರ ಮನುಷ್ಯನು ಆರಾಧನೆಯ ಬಗ್ಗೆ ವಾಕ್ಯವನ್ನು ಪ್ರಸಂಗಿಸುವ ಅಪ್ಪಣೆಗೆ ಕಿವಿಗೊಡಬೇಕು - ನಾಲ್ಕು ರೀತಿಯವುಗಳು ಇವೆಯೆಂದು ಅವರು ತಿಳಿದುಕೊಳ್ಳಬೇಕು. ಅಜ್ಞಾನದ ಆರಾಧನೆ, ವ್ಯರ್ಥವಾದ ಆರಾಧನೆ, ಚಿತ್ತದ ಆರಾಧನೆ ಹಾಗೂ ಸತ್ಯದ ಆರಾಧನೆ. ವಿಗ್ರಹಗಳನ್ನೂ ಮೂರ್ತಿಗಳನ್ನೂ ಮಹಿಮೆ ಪಡಿಸುವವನು (ಅಪೊಸ್ತಲರ ಕೃತ್ಯ 17:22, 23; 1 ಕೊರಿಂಥ 8:5, 6). ಅಜ್ಞಾನದಲ್ಲಿ ಆರಾಧಿಸುವನು. ಸರಿಯಾದ ದೇವರನ್ನು ಆರಾಧಿಸುವವನೂ ವ್ಯರ್ಥವಾಗಿ ಆರಾಧಿಸುವವನಾಗಿದ್ದಾನೆ (ಮತ್ತಾಯ 15:9). ವ್ಯರ್ಥವಾದ ಆರಾಧನೆಯನ್ನು ಮನುಷ್ಯನ ಬೋಧನೆಗಳನ್ನೂ ಆಜ್ಞೆಯನ್ನೂ ಅನುಸರಿಸುವದೆಂದು ಯೇಸು ವಿವರಿಸಿದನು. ಕೈತೊಳೆಯುವದರಿಂದ, ಕಾಲು ತೊಳೆಯುವದರಿಂದ, ಪರಿಶುದ್ಧ ನೀರಿನ ಪಾತ್ರೆಯಲ್ಲಿ ಬೆರಳುಗಳನ್ನು ಅದ್ದುವದರಿಂದ, ಶಿಲುಬೆಯ ಗುರುತು ಮಾಡುವದರಿಂದ, ಮರಿಯಳ ಮತ್ತು ಯೇಸುವಿನ ಮೂರ್ತಿಗಳ ಮುಂದೆ ತಲೆಬಾಗುವದರಿಂದ, ಧೂಪ ಸುಡುವದರಿಂದ, ವಾದ್ಯ ಸಂಗೀತ ಉಪಯೋಗಿಸುವದರಿಂದ, ನರ್ತಿಸುವದರಿಂದ ಹಾಗೂ ಮರಿಜುವಾನಾ ಸೇವನೆಯಿಂದ ಆರಾಧನೆಯಾಗುತ್ತದೆಂದು ಜನರು ವ್ಯರ್ಥವಾಗಿ ಕಲ್ಪಿಸಿಕೊಳ್ಳುತ್ತಾರೆ. ಕೆಲವೊಂದು ಆಹಾರವನ್ನು ತಿನ್ನದಿರುವದನ್ನು ಬಲವಾಗಿ ತೀರ್ಮಾನಿಸಿಕೊಳ್ಳುವದನ್ನು ಆರಾಧನೆಯು ಪ್ರಕಟಿಸುತ್ತದೋ ಇಲ್ಲವೇ ಆರಾಧಿಸುವದಕ್ಕಾಗಿ ತನ್ನನ್ನು ಶಿಸ್ತಿಗೆ ಒಳಪಡಿಸಿಕೊಳ್ಳಬೇಕೋ; ಆದರೆ ಇದು ಕರ್ತನು ಬಯಸುವ ಆರಾಧನೆ ಯಾಗಿರುವದಿಲ್ಲ (ಕೊಲೊಸ್ಸೆ 2:20-22). ನಿಜವಾದ ಆರಾಧನೆಗೆ ಎರಡು ವಿಷಯಗಳಿವೆ: ಅದು ಸರಿಯಾದ ಆತ್ಮದಲ್ಲಿರತಕ್ಕದ್ದು ಹಾಗೂ ಅದು ಸತ್ಯದಲ್ಲಿ ಇರತಕ್ಕದ್ದು (ಯೋಹಾನ 4:24).

ಸತ್ಯಕ್ಕನುಗುಣವಾದ ಆರಾಧನೆಯು ವಾಕ್ಯಕ್ಕೆ ಅನುಗುಣವಾದದ್ದಾಗಿರುತ್ತದೆ (ಯೋಹಾನ 17:17). ವಾಕ್ಯವು ಆರಾಧನೆಯ ಐದು ಕಾರ್ಯಗಳನ್ನು ಮಾತ್ರ ವಿವರಿಸುತ್ತದೆ (ಅಪೊಸ್ತಲರ ಕೃತ್ಯ 2:42; ಎಫೆಸ 5:19). ಇವು ವಾಕ್ಯವನ್ನು ಓದುವುದು (ಕೊಲೊಸ್ಸೆ 4:16), ಒಬ್ಬನ ಆದಾಯದಲ್ಲಿ ಕೊಡುವುದು (2 ಕೊರಿಂಥ 9:7), ರೊಟ್ಟಿ ಮುರಿಯುವುದು (1 ಕೊರಿಂಥ 11:23-26), ಪ್ರಾರ್ಥನೆ (1 ತಿಮೊಥೆ 2:1) ಹಾಗೂ ಹಾಡುವುದು (ಎಫೆಸ 5:19; ಇಬ್ರಿಯ 13:15). ಸತ್ಯವು "ಸತ್ಯದ ಮಾತಿನಲ್ಲಿ ಒಳಗೊಂಡಿರುವಂಥದ್ದು" ಎಂಬುದರ ಬದಲಾಗಿ "ಯಥಾರ್ಥವಾದದ್ದು" ಎಂದು ನಿರ್ವಚಿಸುವುದರಿಂದ ಮನುಷ್ಯನ ಯಾವುದೇ ಬೋಧನೆಯು ಸ್ವೀಕೃತವಾದದ್ದಾಗುತ್ತದೆ! ದೇವರ ನಿಜವಾದ ಬೋಧನೆಯನ್ನು ತಿಳಿಯದವನಿಂದ ಯಾವುದೇ ಬೋಧನೆಯು ಯಥಾರ್ಥವಾಗಿ ಅನುಸರಿಸಲ್ಪಡಬಹುದು. ಮಾನವರ ಬೋಧ

ನೆಗಳು ಆರಾಧನೆಯಲ್ಲಿ ವ್ಯರ್ಥವಾದದ್ದಾಗಿರುವದರಿಂದ (ಮತ್ತಾಯ 15:9), ಯೋಹಾನ 4:24ರಲ್ಲಿಯ "ಸತ್ಯ" ಎಂಬ ಪದವು ಸತ್ಯದ ವಾಕ್ಯದಲ್ಲಿ ಬರೆಯಲ್ಪಟ್ಟದ್ದನ್ನು ಕಂಡುಕೊಳ್ಳ ಲಿಕ್ಕೆ ನೀಯಿತವಾಗಿರತಕ್ಕದ್ದು (ಯೋಹಾನ 17:17).

ಸರಿಯಾದ ಆತ್ಮದಲ್ಲಿ ಆರಾಧನೆಯು ಪರಿಶುದ್ಧ ಬರಹಗಳನ್ನು ಓದುವದರಲ್ಲಿ ಇಲ್ಲವೇ ಪ್ರಾರ್ಥಿಸುವದರಲ್ಲಿ ಇಲ್ಲವೇ ಹಾಡುವದರಲ್ಲಿ (1 ಕೊರಿಂಥ 14:15) ಕೇವಲ ತುಟಿಗಳ ಸೇವೆಯನ್ನು ಪ್ರತಿಬಂಧಿಸುತ್ತದೆ (ಮತ್ತಾಯ 15:8). ಕರ್ತನ ದೇಹವೆಂದು ವಿವೇಚಿಸದೇ ಕರ್ತನ ಭೋಜನದಲ್ಲಿ ಪಾಲುತೆಗೆದು ಕೊಳ್ಳುವುದು ಸರಿಯಾದ ಆತ್ಮದಲ್ಲಿ, ಆರಾಧಿಸು ವಂಥದ್ದಾಗಿರುವದಿಲ್ಲ: ಅದರ ಬದಲು ಅವನು ತನ್ನ ನ್ಯಾಯತೀರ್ಪಿಗೋಸ್ಕರ ತಿಂದು ಕುಡಿಯುತ್ತಿರುವನು (1 ಕೊರಿಂಥ 11:27-29). ಒಬ್ಬನ ಹಣದ ಕಾಣಿಕೆಯು ಹೃದಯ ಪೂರ್ವಕವಾದದ್ದಾಗಿರದಿದ್ದರೆ ಅದನ್ನು ಅವನು ತನ್ನಲ್ಲಿಟ್ಟುಕೊಳ್ಳಬಹುದು (2 ಕೊರಿಂಥ 9:7). ಅವನು ಸರಿಯಾದ ಆತ್ಮದಲ್ಲಿ ಆರಾಧಿಸುತ್ತಿರುವದಿಲ್ಲ.

ಪೌಲನ ಅಪ್ಪಣೆಯಂತೆ ನಡೆಯುತ್ತಿರುವ ದೇವರ ಪ್ರಸಂಗಿಯು ದೈವತ್ವವೆಂದು ತಿಳಿಯುವ ಯಾವುದನ್ನೇ ಆಗಲಿ ಆರಾಧನೆ ಮಾಡುವುದು ಸ್ವೀಕಾರ ಯೋಗ್ಯವಾ ಗಿರುವದಿಲ್ಲ ಮತ್ತು ಒಬ್ಬನೇ ನಿಜವಾದ ದೇವರಿಗೆ ಅನಧಿಕೃತ ಆರಾಧನೆ ಮಾಡುವುದೂ ಸಹ ಸ್ವೀಕಾರ ಯೋಗ್ಯವಾದದ್ದಲ್ಲ ಎಂದು ಜನರಿಗೆ ಸ್ಪಷ್ಟಪಡಿಸುವನು. ದೇವರು ತಾನೇ ಸತ್ಯವಾದ ಹಾಗೂ ಸುಳ್ಳಾದ ಆರಾಧನೆಯ ಮಧ್ಯದಲ್ಲಿ ತೀರ್ಮಾನಿಸುವನು.

**ಕುಟುಂಬ**

"ಭಕ್ತಿಯ ಸಂತತಿಗಾಗಿ" ಪವಿತ್ರ ತಂದೆಯ ಅಪೇಕ್ಷೆಯು (ಮಲಾಕಿಯ 2:15) ಆದಾಮನಿಗೆ ಒಬ್ಬ ಹೆಂಡತಿಯನ್ನು ಮತ್ತು ಹವ್ವಳಿಗಾಗಿ ಒಬ್ಬ ಗಂಡನನ್ನು ಮಾಡಲಿಕ್ಕೆ ಕಾರಣವಾಯಿತು. ವಿವಾಹ ವಿಚ್ಛೇದನವನ್ನು ದೇವರು ಧೂಷಿಸುತ್ತಾನೆ (ಮಲಾಕಿ 2:14-16). ದಂಪತಿಗಳು ಏಕತೆಯಲ್ಲಿ ಬಂಧಿಸಲ್ಪಟ್ಟಿರುತ್ತಾರೆ. ಒಬ್ಬನ ಸಂಗಾತಿಯು ಇನ್ನೊಂಬ್ಬನ ಸಂಗಾತಿಯಾಗಲು ಬಿಡುವುದು ಇಂದು ಪಾಪವೆಂಬಂತೆ ದೇವರಿಂದ ಸ್ವೀಕರಿಸಲ್ಪಟ್ಟಿದೆ (ಮತ್ತಾಯ 19:9). ಹೊಡೆಯುವುದು, ಕುಡಿಯುವುದು, ಹೊಂದಾಣಿಕೆ ವಿಲ್ಲದಿರುವುದು ಮತ್ತು ಪರಿತ್ಯಾಗ ಮಾಡುವುದು ಇನ್ನೊಂದು ವಿವಾಹ ಮಾಡಿಕೊಳ್ಳು ವದಕ್ಕೆ ಸಾಕಷ್ಟು ಕಾರಣವಾಗಿರುವದಿಲ್ಲ, ವಾಕ್ಯವನ್ನು ಪ್ರಸಂಗಿಸಲು ಪೌಲನ ಆಜ್ಞೆಗೆ ನಂಬಿಗಸ್ಥನಾಗಿರುವವನು ಪರಿಶುದ್ಧ ಬರಹಗಳಿಗೆ ಅನುಗುಣವಾಗಿರದ ಮದುವೆಗಳನ್ನು ಕ್ಷಮಿಸುವ ರೂಢಿಯನ್ನು ಖಂಡಿಸುತ್ತಾನೆ.

ದಂಪತಿಗಳು ವ್ಯಭಿಚಾರದಲ್ಲಿ ಜೀವಿಸುತ್ತಿದ್ದರೆ, ಬಾಪ್ತಿಸ್ಮವು ಪಾಪವನ್ನು ಶುದ್ಧೀಕ ರಿಸುವದಿಲ್ಲ ಹಾಗೂ ಅದನ್ನು ಪರಿಶುದ್ಧವಾಗಿ ಮಾಡುವದಿಲ್ಲ. ಒಬ್ಬನು ವ್ಯಭಿಚಾರ ಮಾಡಿದ್ದರಿಂದ ತ್ಯಜಿಸಲ್ಪಟ್ಟಿದ್ದರೆ, ಅವನನ್ನು ಮದುವೆಯಾಗುವವಳು ಅವನೊಂದಿಗೆ ವ್ಯಭಿಚಾರ ಮಾಡುವವಳಾಗಿದ್ದಾಳೆ. ಮಕ್ಕಳು ಒಳಗೊಂಡಿರಲಿ ಇಲ್ಲವೇ ಒಳಗೊಂಡಿರದೇ ಇರಲಿ, ಬಾಪ್ತಿಸ್ಮಕ್ಕೆ ಮೊದಲು ಮದುವೆಯ ಪ್ರಮಾಣ ವಚನಗಳು ಮಾಡಲ್ಪಟ್ಟಿರಲಿ ಇಲ್ಲವೇ ಮಾಡಲ್ಪಡದಿರಲಿ, ಅದು ಮದುವೆಯ ಬಗೆಗಿನ ದೇವರ ನಿಯಮಗಳನ್ನು ಬದಲಾಯಿಸುವದಿಲ್ಲ, ವ್ಯಭಿಚಾರವು ಬೆಂಕಿಯ ಕೊಳ್ಳಕ್ಕೆ ಯೋಗ್ಯವಾಗಿದೆಯೆಂದು ದೇವರು ತೀರ್ಮಾನಿಸಿದ್ದಾನೆ (ಗಲಾತ್ಯ 5:19, 21; ಪ್ರಕಟನೆ 21:8). ದೇವರ ಜನರು ಯಾವುದೇ ಮಾನವ ಜೀವಿಯ ಅಪೇಕ್ಷೆಗೆ ಸತ್ಯದ ವಾಕ್ಯವನ್ನು ಮಣಿಸಲು ಧೈರ್ಯಗೊಳ್ಳಲಾರನು.

**ಆಸಕ್ತಿ**

ಮದುವೆಯ ಬಗ್ಗೆ ಕರ್ತನ ನಿಯಮಗಳಿಗೆ, ರಕ್ಷಣೆಯ ಯೋಜನೆಗೆ ಮತ್ತು ಬೋಧನೆಯ ಇತರ ವಿಷಯಗಳಿಗೆ ಖಂಡಿತವಾಗಿ ಹಿಡಿದುಕೊಳ್ಳುವ, ಆದರೆ ಮೈಗಳ್ಳ ಕ್ರೈಸ್ತರನ್ನು ಪ್ರಭಲವಾದ ಆಸಕ್ತಿಯಿಂದ ಕಾರ್ಯಮಾಡಲು ಎಚ್ಚರಿಸಲು ಸೋತು ಹೋಗುವ ಪ್ರಸಂಗಿಯಿಂದ ವಾಕ್ಯವನ್ನು ಪ್ರಸಂಗಿಸುವ ಅಪ್ಪಣೆಯು ನೆರವೇರಿಸಲ್ಪಡಲಾರದು (1 ಕೊರಿಂಥ 15:58). ಯೇಸುವು ಶ್ರಮೆಪಡಲು ಕಾರಣವಾಗುವ, ಉಗುರು ಬೆಚ್ಚಗಿನ ಕ್ರೈಸ್ತನನ್ನು, ಹೊಟ್ಟೆ ಬೇನೆಯನ್ನು ದೇವರ ಮನುಷ್ಯನು ಸ್ಪಷ್ಟವಾಗಿ ಹೇಳಬೇಕು (ಪ್ರಕಟನೆ 3:16). ಒಳ್ಳೆಯದನ್ನು ಮಾಡುವದನ್ನು ತಿಳಿದಿರುವವನು, ಆದರೆ ಅದನ್ನು ಮಾಡದೇ ಇರುವವನು, ಅವನಿಗೆ ಅದು ಪಾಪವಾಗಿದೆ (ಯಾಕೋಬ 4:17). ಆಸಕ್ತಿಯುಳ್ಳವರಾಗಿದ್ದು ಜ್ಞಾನದ ಕೊರತೆಯುಳ್ಳವರಾಗಿದ್ದವರು ನ್ಯಾಯತೀರ್ಪಿಕೆಯ ದಿನದಲ್ಲಿ ಜ್ಞಾನವಿದ್ದರೂ ಆಸಕ್ತಿಯಿಲ್ಲದವರಿಗಿಂತ ಚೆನ್ನಾಗಿ ಇರುವರು (ಲೂಕ 12:47, 48), "ನಿದ್ರಿಸುವವನೇ ಎಚ್ಚರವಾಗು ಹಾಗೂ ಸತ್ತವರೊಳಗಿಂದ ಎದ್ದೇಳು" (ಎಫೆಸ 5:14).

## ಮುಕ್ತಾಯ

"ವಾಕ್ಯವನ್ನು ಸಾರು": ತಿಮೊಥೆಯನಿಗೆ ಪೌಲನಿಂದ ಕೊಡಲ್ಪಟ್ಟ ಮಹತ್ವದ ಆಹ್ವಾನಕ್ಕಿಂತ ಹೆಚ್ಚಾದದ್ದು ಎಂದೂ ಸೂಚಿಸಲ್ಪಟ್ಟಿರುವದಿಲ್ಲ. ನಮ್ಮಲ್ಲಿ ಪ್ರತಿಯೊಬ್ಬರು (1) ವಾಕ್ಯವನ್ನು ನಂಬಲು, (2) ವಾಕ್ಯಕ್ಕೆ ವಿಧೇಯರಾಗಲು, ಹಾಗೂ (3) ವಾಕ್ಯವನ್ನು ಪ್ರಸಾರ ಮಾಡಲು ದೇವರು ಸಹಾಯಮಾಡಲಿ.

---

ಟಿಪ್ಪಣಿಗಳು

[1]ನೀರೋನ ಒಬ್ಬ ಸುಂದರವಾದ ಉಪಪತ್ನಿಯನ್ನು ಪೌಲನು ಕ್ರಿಸ್ತನ ಕಡೆಗೆ ಮಾರ್ಪಡಿಸಿದನು ಎಂದು ಕ್ರಿಸೊಸ್ಟಮನು ಬರೆದದ್ದನ್ನು ಒಬ್ಬನು ನಂಬಿದರೆ ಇದು ವಿಶೇಷವಾಗಿ ಹಾಗಿರುತ್ತದೆ. "ಅಪವಿತ್ರವಾದ ಸಂಬಂಧಕ್ಕೆ ಹಿಂದಿರುಗುವದನ್ನು ಆಕೆ ನಿರಾಕರಿಸಿದಾಗ ರೋಷಗೊಂಡ ದುಷ್ಟನು ತನ್ನ ಪ್ರತೀಕಾರವನ್ನು ಅಪೊಸ್ತಲನ ಮೇಲೆ ತೀರಿಸಿಕೊಂಡನು ಹಾಗೂ ಅವನಿಗೆ ಮರಣ ದಂಡನೆ ವಿಧಿಸಿದನು" (David Smith, *The Life and Letters of St. Paul* [New York: Harper & Bros., n.d.], 639). [2]ಬೈಬಲಿನಲ್ಲಿಯ ಪ್ರತಿಯೊಂದು ಮಾತು ಕ್ರಿಸ್ತನಿಂದ ಕೊಡಲ್ಪಟ್ಟಿರುವಾಗ, ಕೆಂಪು ಅಕ್ಷರಗಳ ಆವೃತ್ತಿಗಳು "ಕ್ರಿಸ್ತನ ಮಾತುಗಳ ಕೆಂಪು ಬಣ್ಣದಲ್ಲಿವೆ" ಎಂಬ ಪ್ರಭಾವವನ್ನು ಬೀರುತ್ತವೆ. [3]ಈ ಭಾವವು Douai ಆವೃತ್ತಿಯದಾಗಿರುತ್ತದೆ. ಇದು ಕಥೋಲಿಕ್ ಭಾಷಾಂತರವಾಗಿದ್ದು, ಫ್ಲಾಂಡರ್ಸ್‌ದಲ್ಲಿಯ Douai Collegeದಲ್ಲಿ 1568ರಲ್ಲಿ ಆಕ್ಸ್‌ಫರ್ಡ ಪಂಡಿತರ ಗುಂಪಿನಿಂದ ಪ್ರಕಟಿಸಲ್ಪಟ್ಟಿತು. [4]J. W. McGarvey, "Repentance," in *McGarvey's Sermons* (Delight, Ark.: Gospel Light Publishing Co., 1975), 97-98ದಲ್ಲಿ ಈ ವಿಚಾರವು ಕಂಡು ಬರುತ್ತದೆ.

© 2009 Truth for Today